
REVIEW OF RESEARCH
ISSN: 2249-894X
IMPACT FACTOR : 5.7631(UIF)
UGC APPROVED JOURNAL NO. 48514
VOLUME - 8 | ISSUE - 9 | JUNE - 2019

# ಹೈದ್ರಾಬಾದಕರ್ನಾಟಕದ ಕಾದಂಬರಿಗಳಲ್ಲಿ ಬಂಡಾಯ ಪ್ರಜ್ಞೆ

**Dr. Bheemanna H.**
**Assistant Professor and Head , Dept. of Kannada ,**
**Govt. First Grade College & P.G.Center , Sedam Dist : Kalaburagi , Karnataka.**
**(Research Guide of Kannada University, Hampi)**



**ABSTRACT:**
ಕನ್ನಡ ಸಾಹಿತ್ಯದಲ್ಲಿ ಬಂಡಾಯ ಪ್ರಜ್ಞೆ ಎನ್ನುವಂತಹದು 1970 ರ ನಂತರದಲ್ಲಿ ಕಂಡು ಬರುವಂತಹದು. ಬಂಡಾಯ ಎನ್ನುವಂತಹದು ಆದಿಕವಿ ಪಂಪನಲ್ಲಿ ನಾವು ಕಂಡುಕೊಳ್ಳುತ್ತೇವೆ. ಆಶ್ರಯದಾತನನ್ನು ಹೊಗಳಿ ಕಾವ್ಯವನ್ನು ಬರೆದರು. ಕರ್ಣನಂತಹ ಪಾತ್ರಗಳನ್ನು ಸೃಷ್ಟಿಸುವುದರ ಮೂಲಕ ಬಂಡಾಯದ ನಿಲುವು ಹುಟ್ಟಿಸಿರುವುದು ನೋಡುತ್ತೇವೆ. ಬಂಡಾಯ ಎನ್ನುವಂತ ಪದದ ಅರ್ಥವನ್ನು ಡಾ.ಬಸವರಾಜ ಸಬರದರವರು ಹೀಗೆ ಹೇಳುವರು "'ಬಂಡಾಯ' ವೆಂಬುದು ಸಂಸ್ಕೃತದ 'ಬಂಡು' ಪದದ ಮೂಲದಿಂದ ಬಂದಿದೆ. ಇದನ್ನು 'ಭಣ್ಣು' ಎಂದು ಕೂಡ ಬಳಸಲಾಗಿದೆ. ಇದರ ಮೂಲಾರ್ಥ 'ಯುದ್ಧ' ಎಂದಿದೆ. ಆದರೆ ಕನ್ನಡದಲ್ಲಿ ಇದರ ಪ್ರಧಾನಾರ್ಥ 'ರಿವೋಲ್ಟ್' ಎಂದಾಗುತ್ತದೆ. ಇಬ್ಬರು ಸ್ವತಂತ್ರ ರಾಜರು ಯುದ್ಧ ಮಾಡುವುದನ್ನು ಬಂಡಾಯವೆಂದು ಎಲ್ಲಿಯೂ ಕರೆದಿಲ್ಲ. ಆದರೆ ಒಂದು ರಾಜ್ಯದಲ್ಲಿ ಆ ರಾಜ್ಯ ವ್ಯವಸ್ಥೆಯ ವಿರುದ್ಧ. ರಾಜನ ವಿರುದ್ಧ, ದನಿಯೆತ್ತುವುದನ್ನು ಬಂಡಾಯವೆಂದು ಕರೆಯಲಾಗಿದೆ"(ಸಂ.ಸಬರದ: 201: 2002). ಜನರು ಅನ್ಯಾಯ, ಅತ್ಯಾಚಾರ, ಆಕ್ರಮಣ ಮತ್ತು ತಮ್ಮ ಹಕ್ಕು ಬಾಧ್ಯತೆಗಳಿಗಾಗಿ ಹೋರಾಡುವುದನ್ನು ಯಾವಾಗಿನಿಂದ ಕಲೆತರೋ ಆವಾಗಲೇ ಬಂಡಾಯದ ಮನೋಭಾವ ಬೆಳೆಸಿಕೊಂಡರೆಂದು ಹೇಳಬಹುದು. ಬಂಡಾಯ ಸಾಹಿತ್ಯ ಶೋಷಿತ ವರ್ಗ, ಅಸ್ಪೃಶ್ಯತೆ, ಲಿಂಗಬೇಧ, ಜಾತಿಯತೆ, ಮೇಲು–ಕೀಳು ಎಂಬ ತಾರತಮ್ಯದ ವಿರುದ್ಧ ಹೊರಾಡುವಂತದು. ಯಾವ ವ್ಯಕ್ತಿಗೆ ಸಾಮಾಜಿಕವಾಗಿ, ಸಾಂಸ್ಕೃತಿಕವಾಗಿ, ಜನರಪರವಾದ ನಿಲುವುಗಳಿಗೆ ತೊಂದರೆ ಬಂದೋದಗುವುದೋ ಆಗ ಆ ವ್ಯಕ್ತಿಯಲ್ಲಿ ಹುಟ್ಟುವ ಹೋರಾಟವೇ ಬಂಡಾಯವಾಗಿರುವುದು. ಕನ್ನಡದ ಹಲವು ಕವಿಗಳು ತಮ್ಮ ಸಾಹಿತ್ಯದ ಮೂಲಕ ಬಂಡಾಯದ ಪ್ರಜ್ಞೆಯನ್ನು ಜನರಲ್ಲಿ ಮೂಡಿಸಿದ್ದಾರೆ.

## INTRODUCTION

ಹೈದ್ರಾಬಾದ ಕರ್ನಾಟಕದ ಕಾದಂಬರಿಗಳಲ್ಲಿಯು ಮಾನವಪರ ನಿಲುವಿಗಾಗಿ ಹೋರಾಟದ ಮನೋಭಾವ ಮೂಡಿಸುವಂತಹ ಹಲವು ಅಂಶಗಳನ್ನು ಕಾದಂಬರಿಕಾರರು ಬಂಡಾಯ ಪ್ರಜ್ಞೆ ಬೆಳೆಸುವ ಪಾತ್ರಗಳನ್ನು ಸೃಷ್ಟಿಸಿ, ಜನತೆಗೆ ಬಂಡಾಯದ ಹೊಸ ಆಲೋಚನೆಗಳು, ಹೊಸ ಬದುಕಿನ ಮೌಲ್ಯಗಳು, ಜನಪರವಾದ ಸಾಂಸ್ಕೃತಿಕ ಹೋರಾಟದ ಬದುಕು ಹೀಗೆ ಹಲವು ನಿಲುವುಗಳನ್ನು ತಿಳಿಸಿಕೊಟ್ಟಿದ್ದಾರೆ. ಬಯಲು ಪ್ರದೇಶದಲ್ಲಿ ಮೂಡಿ ಬಂದ ಕಾದಂಬರಿ ಸಾಹಿತ್ಯವು ಕನ್ನಡ ಬಂಡಾಯ ಸಾಹಿತ್ಯದಲ್ಲಿ ತನ್ನದೇ ಆದ ಮಹತ್ವದ ಪಾತ್ರವಹಿಸಿರುವಂತ ಹದ್ದಾಗಿದೆ. ಚೆನ್ನಣ್ಣ ವಾಲೀಕಾರ, ಗೀತಾ ನಾಗಭೂಷಣ, ಕುಂ.ವೀರಭದ್ರಪ್ಪ, ಜಂಬಣ್ಣ ಅಮರಚಿಂತ, ಶಾಂತರಸ, ಬಿ.ಟಿ. ಲಲಿತಾನಾಯಕ ಇಂತಹ ಹಲವು ಬರಹಗಾರರು ಬಂಡಾಯ ಪ್ರಜ್ಞೆಯನ್ನು ಜನತೆಗೆ ಮೂಡಿಸುವಲ್ಲಿ ತಾಳಿದ ನಿಲುವು ಅರಿಯಲು ಅವರ ಸಾಹಿತ್ಯವೇ ಸಾಕ್ಷಿಯಾಗಿದೆ. ಸಾಹಿತ್ಯ ಎಂಬುವುದು ಖಡ್ಗ. ಈ ಖಡ್ಗದಿಂದ ಹೊಸ ಸಮಾಜದ, ಹೊಸ ಮೌಲ್ಯ ಕಟ್ಟುವುದೇ ಕಾದಂಬರಿಕಾರರ ಮುಖ್ಯ ಗುರಿಯಾಗಿದೆ, ಎಂದು ಅವರ ಸಾಹಿತ್ಯದ ಮೂಲಕ ತಿಳಿದು ಬರುತ್ತದೆ.

"ವ್ಯಕ್ತಿಗೌರವ, ಪ್ರಜಾಪ್ರಭುತ್ವವಾದಿ ನೆಲೆ, ಎಡಪಂಥೀಯ ಆಲೋಚನೆಯನ್ನು ಮುಖ್ಯ ನೆಲೆಯಾಗಿ ಶೋಧಿಸುವ ಈ ಬಂಡಾಯ ಸಾಹಿತ್ಯ ಮುಖ್ಯವಾದ ಸಂವೇದನೆಗಳನ್ನು ಹುಟ್ಟು ಹಾಕಿದೆ. ಅವುಗಳೆಂದರೆ. 1.ದಲಿತ ಸಂವೇದನೆ, 2.ಸ್ತ್ರೀ ಸಂವೇದನೆ, 3.ಮುಸ್ಲಿಂ ಸಂವೇದನೆ ಹೀಗೆ ಬಂಡಾಯ ಸಾಹಿತ್ಯ ಮುಖ್ಯವಾಗಿ ಬದುಕಿನ ಅಸಮಾನತೆಗಳಾದ ಜಾತಿ, ಅಸ್ಪೃಶ್ಯತೆ, ಧರ್ಮ, ಪ್ರಭುತ್ವ, ಲಿಂಗಭೇದಗಳನ್ನು, ವರ್ಗ ಸಂಘರ್ಷಗಳನ್ನು ಕುರಿತು ತನ್ನ ಬದುಕಿನ ಇರುವಿಕೆ ಮತ್ತು ಪ್ರತಿಭಟನೆಯನ್ನು ಏಕಕಾಲಕ್ಕೆ ಪ್ರಕಟಿಸುತ್ತದೆ"(ಸಂ.ದಳವಾಯಿ: 78: 1996). ಬಂಡಾಯ ಎಂಬುವುದು ಮೇಲೆ ಹೇಳಿದಂತೆ ಮನುಷ್ಯನ ಸಿಟ್ಟು, ರೋಚು ಯಾವಾಗ ಜಾಗೃತಗೊಳ್ಳುತ್ತವೆಯೋ ಆವಾಗಲೆ ತನ್ನ ಮೇಲೆ ಆದ ಅಧರ್ಮ, ಅಸಮಾನತೆ, ವರ್ಗ ಭೇದಗಳ ವಿರುದ್ಧ ಹೊರಾಟಕ್ಕೆ ಇಳಿಯುವದನ್ನು ಅದೆ ಬಂಡಾಯವಾಗಿ ಪರಿಣಮಿಸುತ್ತದೆ. ಬಂಡಾಯ ಎನ್ನುವುದು ಶೋಷಿತ ವರ್ಗದ, ವ್ಯಕ್ತಿಯ ಧ್ವನಿಯಾಗಿರುತ್ತದೆ. ಕನ್ನಡ ಸಾಹಿತ್ಯದಲ್ಲಿ ದಲಿತ ಮತ್ತು ಬಂಡಾಯ ಸಾಹಿತ್ಯ ಜೊತೆ

ಜೊತೆಯಾಗಿ ಬೆಳೆದು ಬಂದಿರುವಂತವುಗಳಾಗಿವೆ. ಆದರೆ ಎರಡು ಸಾಹಿತ್ಯದಲ್ಲಿ ಭಿನ್ನತೆಯನ್ನು ಕಂಡುಕೊಳ್ಳುತ್ತೇವೆ. ದಲಿತ ಬಂಡಾಯ ಎನ್ನುವಂತಹವು ಒಂದು ಬಂಡಿಯ ಎರಡು ಗಾಲಿಗಳಿದ್ದ ಹಾಗೆ. ಒಂದೇ ಗುರಿ, ಉದೇಶ, ಧ್ಯೇಯ ಧೋರಣೆಯಲ್ಲಿಯೂ ಒಂದೇ ನಿಲ್ಲುವು ಇಟ್ಟುಕೊಂಡು ಚಲಿಸುವಂತವುಗಳಾಗಿವೆ. ಸಮಾಜವನ್ನು ಬಿಟ್ಟು ಮನುಷ್ಯನ ಜೀವನವಿಲ್ಲ. ಜೀವನದ ಪ್ರತಿಬಿಂಬವೇ ಹೋರಾಟ. ಹೋರಾಟದ ಪ್ರತಿರೂಪವೇ ಬಂಡಾಯ ಸಾಹಿತ್ಯವಾಗಿದೆ. ಮನುಷ್ಯನಿಗೆ ವಾಸ್ತವಿಕತೆಯನ್ನು ತಿಳಿಸುವಂತಹದು, ಬದುಕಿನ ನೆಲೆಯನ್ನು ತೋರಿಸುವಂತಹದು ಜೊತೆಗೆ ಶೋಷಣೆಯನ್ನು ದಿಕ್ಕರಿಸುವುದು ಬಂಡಾಯ ಸಾಹಿತ್ಯದ ಮೂಲ ಉದ್ದೇಶವಾಗಿರುವುದು. ಕನ್ನಡ ಸಾಹಿತ್ಯದ ಚರಿತ್ರೆಯಲ್ಲಿಯೇ ಬಂಡಾಯ ಸಾಹಿತ್ಯಕ್ಕೆ ಅತ್ಯಂತ ಮಹತ್ವ ಪೂರ್ಣವಾದ ಸ್ಥಾನವಿದೆ. ದುರ್ಬಲರ ಮೇಲೆ ನಡೆಯುವ ಅನ್ಯಾಯ, ಆಕ್ರಮಣ, ಶೋಷಣೆ, ಅಮಾನವೀಯತೆಯ ಹಲವು ನಿಲುವುಗಳನ್ನು ಬಂಡಾಯ ಸಾಹಿತ್ಯವು ಎತ್ತಿ ಹಿಡಿಯುತ್ತದೆ. ಮನುಷ್ಯನಿಗೆ ಬೇಕಾದ ಬದುಕಿನ ಸುವ್ಯವಸ್ಥಿತ ಮಾರ್ಗ ತೋರಿಸುವಲ್ಲಿ ಮಹತ್ವದ ಪಾತ್ರ ವಹಿಸುತ್ತದೆ. ಬಂಡಾಯ ಸಾಹಿತ್ಯಿಯು ಇವೆಲ್ಲವುಗಳನ್ನು ಅರಿತುಕೊಂಡು ಹೊಸ ಬದುಕಿನ ಹೊಸ ಹಾದಿಯನ್ನು ಜನರಿಗೆ ತೋರಿಸುವಂತವನಾಗಿರುತ್ತಾನೆ. ಮಾನವೀಯ ಮೌಲ್ಯಗಳನ್ನು ತನ್ನ ಸೃಜನಶೀಲ ಬರವಣಿಗೆಯ ಮೂಲಕ ಹೊರಹಾಕುವನು. ಇದು ಶೋಷಿತ ವರ್ಗದವರಲ್ಲಿ ಹೋರಾಟದ ಭಾವನೆಯನ್ನು ಬೆಳೆಸುವುದು ಸಮಾಜದಲ್ಲಿ ಸಮಾನತೆಯನ್ನು ನೆಲೆಗೊಳಿಸಬೇಕಾದರೆ ಬಂಡಾಯ ಮನೋಭಾವನೆಗಳು ಬೇಕು. ವ್ಯಕ್ತಿಯಲ್ಲಿ ಬಂಡಾಯ ಇಲ್ಲದೆ ಹೋದರೆ ಅನ್ಯಾಯ, ಅಧರ್ಮಗಳೇ ಹೆಚ್ಚಾಗುತ್ತವೆ. ಇಂಥವುಗಳನ್ನು ಕಡೆಗಣಿಸಿ ಸುಂದರ ಬದುಕು ನಿರ್ಮಾಣ ಮಾಡುವಲ್ಲಿ ಬಂಡಾಯ ಸಾಹಿತ್ಯ ಮಹತ್ವದ ಪಾತ್ರ ವಹಿಸುತ್ತದೆ. ಬಂಡಾಯದ ಪ್ರಜ್ಞೆಯನ್ನು ಬೆಳೆಸಲು ಸಾಹಿತ್ಯವು ಶ್ರಮಿಸುತ್ತಲೇ ಸಾಗುವಂತಹದಾಗಿದೆ.

ಹೈದ್ರಾಬಾದ ಕರ್ನಾಟಕವು ಪ್ರತಿಭಟನೆ ಮಾಡುವುದರಲ್ಲಿ ಹಿಂದಿನಿಂದಲೂ ಮತ್ತು ಇಂದಿಗೂ ಪ್ರಧಾನ ಗುಣ ಹೊಂದಿರುವುದು ಇಲ್ಲಿಯ ಬಂಡಾಯ ಸಾಹಿತ್ಯದ ನೆಲೆಯನ್ನು ಅರಿತಾಗ ತಿಳಿದು ಬರುತ್ತದೆ. ಇಲ್ಲಿಯ ಸೃಜನಶೀಲ ಬರಹಗಾರರು ಬಂಡಾಯ ಕಾದಂಬರಿಗಳನ್ನು ಬರೆಯುವುದರ ಜೊತೆಗೆ ಬಂಡಾಯದ ಬೀಜವನ್ನು ಜನರಲ್ಲಿ ಬಿತ್ತಲು ಮಾಡಿದ ಪ್ರಯತ್ನ ಅವರ ಸಾಹಿತ್ಯದಿಂದ ತಿಳಿದುಬರುತ್ತದೆ. ಈ ಭಾಗದ ಕಾದಂಬರಿಗಳಲ್ಲಿ ಕೆಳವರ್ಗದ ಜನತೆಯ ಹೊಸ–ಹೊಸ ದೃಶ್ಯಗಳನ್ನು, ಬದುಕಿನ ಹಲವು ಸಂಗತಿಯನ್ನು ಬಿಡಿ ಬಿಡಿಯಾಗಿ ಕಾದಂಬರಿಕಾರರು ಸತ್ಯದ ನೆಲೆಯಲ್ಲಿ ತೋರಿಸಿದ್ದಾರೆ. ಬಯಲು ಸೀಮೆಯ ಮಣ್ಣಿನಲ್ಲಿ ಮೂಡಿಬಂದ ಬಂಡಾಯ ಸಾಹಿತ್ಯದ ಮನೋಧರ್ಮ ಈ ಮಣ್ಣಿನ ಮಕ್ಕಳ ನೋವಿನ ಧ್ವನಿಯಾಗಿ ನಿಲ್ಲುವಂತದ್ದಾಗಿದೆ. ಪ್ರತಿಭಟನೆ, ಹೊರಾಟ ತಲೆತಲಾಂತರದಿಂದ ನಡೆದು ಕೊಂಡು ಬಂದಿರುವಂತವುಗಳಾಗಿವೆ. ಇಲ್ಲಿಯ ಹಲವು ಕಾದಂಬರಿಗಳಲ್ಲಿ ಬಂಡಾಯದ ನೆಲೆಯನ್ನು ಸಂಕ್ಷಿಪ್ತವಾಗಿ ಈ ಕೆಳಗಿನಂತೆ ಅಭ್ಯಾಸಿಸಲಾಗಿದೆ.

## ಬಂಡಾಯಪ್ರಜ್ಞೆ :

ಕನ್ನಡ ಸಾಹಿತ್ಯದಲ್ಲಿ ಕುಂ.ವೀ. ಎಂದೇ ಪ್ರಖ್ಯಾತರಾದ ಕುಂಬಾರ ವೀರಭದ್ರಪ್ಪನವರು ಹೈದ್ರಾಬಾದ ಕರ್ನಾಟಕದ ಪ್ರಮುಖ ಬಂಡಾಯ ಸಾಹಿತ್ಯಗಳಲ್ಲಿ ಒಬ್ಬರಾಗಿದ್ದಾರೆ. ಇವರ ಸಾಹಿತ್ಯವು ಖಡ್ಗದಷ್ಟೆ ಹರಿತವಾದದು. ಕೆಳವರ್ಗದವರ, ದಲಿತರ, ಬಡವರ, ಕೂಲಿಕಾರ್ಮಿಕರ ಬದುಕಿನ ಚಿತ್ರಣ ಕೊಡುವಲ್ಲಿ ಅವರು ತೋರುವ ನಿಲುವು ಬಹಳ ವಿಶಿಷ್ಟ ರೀತಿಯದ್ದಾಗಿದೆ. ಬಂಡಾಯದ ಪ್ರಖರತೆ, ಮೊನಚುಗಳು ಕುಂ.ವೀ. ಅವರ ಕಾದಂಬರಿಗಳಲ್ಲಿ ಕಂಡುಬರುತ್ತದೆ. ಇವರ ಕಪ್ಪು ಕಾದಂಬರಿ, ಶಾಮಣ್ಣ ಇಂತಹ ಹಲವು ಕಾದಂಬರಿಗಳಲ್ಲಿ ವಾಸ್ತವತಾವಾದವನ್ನೇ ಸಂಪೂರ್ಣವಾಗಿ ಒಪ್ಪಿಕೊಂಡು, ಶ್ರೇಣಿಕೃತ ವ್ಯವಸ್ಥೆಯು ವಿರುದ್ಧ, ಸಾಮಾಜಿಕ ವ್ಯವಸ್ಥೆಯ ವಿರುದ್ಧ ಹೋರಾಟದ ನೆಲೆಗಳನ್ನು ಬಿಂಬಿಸುವರು. ಸಮಾಜದ ಬದಲಾವಣೆಗೆ ಪ್ರೇರಕವಾದ ಹಲವು ಅಂಶಗಳು ಇವರ ಕಾದಂಬರಿಗಳಲ್ಲಿ ನೋಡುತ್ತೇವೆ. ಅರಮನೆ ಕಾದಂಬರಿಯು 18,19ನೇ ಶತಮಾನದಲ್ಲಿ ಭಾರತದ ಸ್ಥಿತಿಗತಿ ಮತ್ತು ಸಾಮಾಜಿಕ ವ್ಯವಸ್ಥೆ, ಇಲ್ಲಿಯ ಜಮೀನ್ದಾರ ಪದ್ಧತಿ, ಊಳಿಗಮಾನ್ಯ ವ್ಯವಸ್ಥೆ ಜೊತೆಗೆ ಅಧಿಕಾರದ ದಾಹದಲ್ಲಿ ಬ್ರಿಟಿಷರು ಭಾರತೀಯರಿಗೆ ಮಾಡಿದ ತೊಂದರೆಗಳನ್ನು ಈ ಎಲ್ಲಾ ಅಂಶಗಳು ಚಿತ್ರಿಸುವುದರ ಜೊತೆಯಲ್ಲಿ ಹೊಸ ಬದುಕಿನ ನೆಲೆಗಳನ್ನು ತಿಳಿಸುತ್ತಾರೆ. ಅರಮನೆಯ ಪ್ರಮುಖ ಪಾತ್ರದಾರಿಯಾದ ಸರ್ ಥಾಮಸ್ ಮನ್ರೋರವರ ವ್ಯಕ್ತಿತ್ವ–ಸಾಧನೆಯನ್ನು ಸಂಘರ್ಷಗಳನ್ನು ಮನೋಜ್ಞವಾಗಿ ಕಾದಂಬರಿಯ ಮೂಲಕ ಚಿತ್ರಿಸುವಲ್ಲಿ ಕುಂ.ವೀ.ರವರು ಮಹತ್ವದ ಪಾತ್ರವಹಿಸುವರು. ಅರಮನೆ ಕಾದಂಬರಿಯ ಚಾರಿತ್ರಿಕ, ಧಾರ್ಮಿಕ, ಸಾಮಾಜಿಕ ಆಯಾಮಗಳನ್ನು ಹೆಚ್ಚು ಬಿಂಬಿಸುವಂತಹದು. ಸರ್ ಥಾಮಸ್ ಮನ್ರೋ ಒಬ್ಬ ಐತಿಹಾಸಿಕ ವ್ಯಕ್ತಿಯಾಗಿರುವನು. ಈತನನ್ನು ಮುಖ್ಯವಾಗಿ ಇಟ್ಟುಕೊಂಡು ಕಾದಂಬರಿಕಾರರು ಶ್ರೀಮಂತ ವ್ಯಕ್ತಿಗಳು, ಜಮೀನದಾರರ, ದರ್ಪದ ವ್ಯಕ್ತಿಗಳ ನಿಲುವುಗಳನ್ನು ಖಂಡಿಸುವರು. ಕುಂ.ವೀರಭದ್ರಪ್ಪನವರು ಅರಸು ಮನೆತನದ ಆಳುವಿಕೆಯನ್ನು ತಿಳಿಸುವಲ್ಲಿ ಜರುಮಲಿಯ ರಾಜ, ನಿಚ್ಚಾಪುರದ ರಾಜ, ಮುಂತಾದವರ ಚಿತ್ರಣವನ್ನು ಕೊಡುವರು. ಇವರಿಂದ ಜನರಿಗಾದ ಅನ್ಯಾಯ ಆಕ್ರಮಣಗಳನ್ನು ಕಾದಂಬರಿಯಲ್ಲಿ ಬಿಂಬಿಸಿದ್ದಾರೆ. ಅರಸರನ್ನು ಸದೆಬಡೆಯಲು ಹೊರಟ ಮತ್ತು ಕಾದಂಬರಿಯಲ್ಲಿ ಹೆಣ್ಣು ಮಕ್ಕಳನ್ನು ಹರಾಜುಮಾಡಲಾದ ಬಗೆಯನ್ನು ತಿಳಿಯುತ್ತದೆ. ಮದಕೇರಿ ಸಂಸ್ಥಾನದ ರಾಜಾ ಕದಿರೆನಾಯಕ ತನಗೆ ಹಣಕಾಸಿನ ಪರಿಸ್ಥಿತಿ ಅಸ್ಥವ್ಯಸ್ಥ ಆದಾಗ ಅಂತಃಪುರದ ಹಲವಾರು ಸುಂದರ ಹೆಣ್ಣುಗಳನ್ನು ಅವರ ರೂಪ ಲಾವಣ್ಯಕ್ಕೆ ಅನುಸಾರವಾಗಿ ಹರಾಜು ಹಾಕುವನು ಇಲ್ಲಿ ಹೆಣ್ಣು ಮಕ್ಕಳು ಪಶುವಿಗಿಂತಲೂ ಕಡೆಯಾಗಿ ಕಂಡರು. ರಾಜನ ವಿರುದ್ಧ ಜನರಿಗೆ ಸಿಟ್ಟು, ಆಕ್ರೋಶಗಳು ಹುಟ್ಟಿದರು. ರಾಜ ಆಡಳಿತದ ವಿರುದ್ಧ ಧ್ವನಿಯೆತ್ತುವುದು ಕಷ್ಟವಾಗುವುದು. ಈ ವ್ಯವಸ್ಥೆಯನ್ನು ಕಡೆಗಣಿಸುವ ಹಂಬಲ ಹಲವು ವ್ಯಕ್ತಿಗಳಿಗಿತ್ತು ಎಂಬುವು ಕಾದಂಬರಿಯಲ್ಲಿ ತಿಳಿಯುತ್ತದೆ. ಪಾಳೆಗಾರ ಪದ್ಧತಿಯನ್ನು ಕಡೆಗಣಿಸಲು ನಡೆಯುವ ಹಲವು ತಂತ್ರಗಳು ಈ ಕಾದಂಬರಿಯಲ್ಲಿ ಕಂಡುಬರುತ್ತವೆ.

ಅರಮನೆ ಕಾದಂಬರಿಯು ಧಾರ್ಮಿಕ ನಂಬಿಕೆಗಳು ಹಾಗೂ ಆಚರಣೆಗಳು ಪರಂಪರಾಗತವಾಗಿ ಹರಿದು ಬಂದಿರುವುದನ್ನು ತಿಳಿಸುವುದರ ಜೊತೆಗೆ ವಸಾಹತುಶಾಹಿಯ ಆಗಮನವನ್ನು ಚಿತ್ರಿಸುವುದು. ಅರಮನೆಯಲ್ಲಿ ಮೂಡಿಬಂದಿರುವಂತೆ ಸ್ಥಾನಮಾನಗಳಿಗಾಗಿ, ಅಧಿಕಾರಕ್ಕಾಗಿ ಹೋರಾಟ ನಡೆಯುತ್ತವೆ. ಇಲ್ಲಿಯ ಹೋರಾಟದ, ಪಾತ್ರಗಳು ಮೇಲ್ವರ್ಗದವುಗಳು ಮತ್ತು ವಂಶಪರಂಪರೆಯಿಂದ ಆಳುವಿಕೆ ಮಾಡಿರುವಂತವು. ಅವುಗಳು ತಮ್ಮ ಅಧಿಕಾರಕ್ಕಾಗಿ ಸಂಪತ್ತಿನ ದಾಹಕ್ಕಾಗಿ ನಡೆಸಿದ ಆಕ್ರಮಣಗಳು ಆಗಿವೆ ಎಂದು ತಿಳಿಯುತ್ತವೆ. ಕುಂ.ವೀರಭದ್ರಪ್ಪನವರ ಅರಮನೆ ಕಾದಂಬರಿಯು ಬಂಡಾಯದ ಮನೋಧೋರಣೆಗಳನ್ನು ಹೊತ್ತುನಿಂತಿರುವಂತಹದು. ಆದರೆ ಯಾವ ಪಾತ್ರವು ಇಲ್ಲಿ ಬಂಡಾಯ ಸಾರಲು ಪ್ರಯತ್ನ ಪಡುವುದಿಲ್ಲ. ಈ ಕಾದಂಬರಿಯು ವಾಸ್ತವತಾವಾದದ ಮಜಲುಗಳು ಹೊತ್ತುನಿಂತಿರುವಂತಹದು.

ಜಮೀನುದಾರ ವ್ಯವಸ್ಥೆ, ಪಾಳೆಗಾರಿಕೆಯಂತ ವ್ಯವಸ್ಥೆಗಳ ವಿರುದ್ಧ ಹೋರಾಟದ ದಾರಿಯನ್ನು ತೋರಿಸುವಂತಹದು ಮತ್ತು ಮನುಷ್ಯ ಬದುಕಿನ ನೆಲೆಯನ್ನು ತಿಳಿಸುವಲ್ಲಿ ಅರಮನೆ ಕಾದಂಬರಿಯು ಮಹತ್ವದ ಪಾತ್ರವಹಿಸುತ್ತದೆ. ಕಾದಂಬರಿಯಲ್ಲಿ ಯಾವ ಪಾತ್ರಗಳು ಬಂಡಾಯ ಮಾಡದೆ ಇದ್ದರು ಕಾದಂಬರಿಯಿಂದ ತಿಳಿದುಬರುವ ವಿಷಯ ಒಂದು ಅನಿಷ್ಟ ವ್ಯವಸ್ಥೆಯ ವಿರುದ್ಧ ಜನರಲ್ಲಿ ಆಕ್ರೋಶ ಮೂಡಿಸುವ ಪ್ರಯತ್ನಗಳು ನಡೆದಿವೆ. ಮನುಷ್ಯ ಮನುಷ್ಯನಾಗಿ ಬಾಳಲು ಮಾಡುವ ಹಲವು ತಂತ್ರಗಳನ್ನು ಈ ಕಾದಂಬರಿಯಲ್ಲಿ ಕುಂ.ವೀರಭದ್ರಪ್ಪನವರು ಚಿತ್ರಿಸಿದ್ದಾರೆ. ಇವರ ಶಾಮಣ್ಣ ಕಾದಂಬರಿಯು ವಾಸ್ತವವಾದ ಮಿತಿಗಳನ್ನು ಮೀರುವುದಕ್ಕಿಂತ ಹೆಚ್ಚಾಗಿ ವಾಸ್ತವ ಎಂಬ ಪರಿಕಲ್ಪನೆಯನ್ನು ಮೂಡಿಸುವಂತಹದಾಗಿದೆ. ಈ ಕಾದಂಬರಿಯಲ್ಲಿ ಹೋರಾಟ, ಉತ್ಪ್ರೇಕ್ಷೆ, ವಿಡಂಬನೆ, ವ್ಯಂಗ್ಯ ಹೀಗೆ ಚಿತ್ರಿಸುವಲ್ಲಿ ಬಂಡಾಯದ ಹಲವು ಗುರುತರ ಧ್ವನಿಯನ್ನು ಹಳ್ಳಿಯ ಬದುಕಿನಲ್ಲಿ ಮೂಡಿಸಿರುವರು.

ಕುಂ.ವೀರಭದ್ರಪ್ಪನವರ ಕಪ್ಪು ಕಾದಂಬರಿಯು ಬಂಡಾಯ ಸಾಹಿತ್ಯದ ಹಲವು ಮುಖಗಳನ್ನು ಹೊತ್ತು ನಿಂತಿರುವಂತದು. ಈ ಕಾದಂಬರಿಯನ್ನು ಕುರಿತು ಡಾ. ಬಸವರಾಜ ಸಬರದವರು ಹೀಗೆ ಹೇಳುವರು. "ಬಂಡಾಯದ ಪ್ರಖರತೆಯಲ್ಲಿಯೇ ಇಲ್ಲಿ ಮುಗ್ಧತೆಯ ಕನಸುಗಳು ಅರಳಿವೆ. ಉರಿದ ಕೆಂಡದ ನಡುವೆ ಪಲ್ಲವಿಸಬಹುದಾದ ಆಶಯವೂ ಇಲ್ಲಿದೆ. ಕಾಗೆ ಗೂಬೆಗಳ ನಡುವೆ ಕೋಗಿಲೆಯ ಸ್ವರಕ್ಕಾಗಿ ಹುಡುಕಾಟ ನಡೆದಿದೆ. ಬಂಡಾಯದ ಅನೇಕ ಸಂಗತಿಗಳನ್ನು, ಜನಪರ ನಿಲುವಿನ ಅನೇಕ ಮಗ್ಗಲುಗಳನ್ನು ಕುಂ.ವೀ.ರವರು ಇಲ್ಲಿ ಕಲಾತ್ಮಕವಾಗಿ ದಾಖಲಿಸಿದ್ದಾರೆ."(ಸಂ.ಸಬರದ: 239: 2002) ಕಪ್ಪು ಕಾದಂಬರಿಯು ಕುಂ.ವೀ. ಅವರ ಪ್ರಥಮ ಕಾದಂಬರಿ ಈ ಕಾದಂಬರಿಯೂ ಊಳಿಗಮಾನ್ಯ ಪದ್ಧತಿಯ ವಾಸ್ತವ ಸ್ಥಿತಿಯ ನೈಜ ಸಂಗತಿಗಳ ದಾಖಲೆಯ ಸಂಗತಿಗಳಿಗೆ ಇಂದಿಗೂ ಹೆಸರಿಸಬಹುದಾಗಿದೆ. ಈ ಕಾದಂಬರಿಯು ಹಲವಾರು ಕಾರಣಗಳಿಂದ ಮಹತ್ವ ಪಡೆದಿರುವಂತಹದು. ಕಥಾನಾಯಕಿ ಗೌರಿಯ ಬದುಕಿನ ಧಾರುಣ ಸ್ಥಿತಿಯನ್ನು ಈ ಕಾದಂಬರಿಯಲ್ಲಿ ಮೂಡಿಬಂದಿದೆ. ಕೆಳವರ್ಗದ ಜನತೆಯ ಅಸಾಹಯಕತೆಯ ಧ್ವನಿ ಕೇಳಿಸುವುದು. ಮಾಸೂರಿನ ಕರಿಗೌಡ ಮತ್ತು ಬಾಸುರಿನ ಸಣ್ಣದ್ರಗೌಡನತಂಹ ಶ್ರೀಮಂತರ ವಿರುದ್ಧ ಕೇವಲ ಘೋಷಣಾತ್ಮಕ ಬಂಡಾಯ ಕಂಡುಬರುತ್ತದೆ. ಆದರೆ ಕಾದಂಬರಿಯು ಓದುಗರ ವಿಚಾರ ಶಕ್ತಿ, ಹೋರಾಟದ ಭಾವನೆ, ಮನುಷ್ಯತ್ವದ ನೆಲೆಗಳಿಗೆ ಹೊಳಪು ನೀಡುವಲ್ಲಿ ಕಾದಂಬರಿಯೂ ಮಹತ್ವದ ನಿಲುವು ತಾಳುವುದು. ಇಲ್ಲಿ ಕೇವಲ ಮೇಲ್ವರ್ಗದ ಜನರ ವಿರುದ್ಧ ಧ್ವನಿಯೆತ್ತಲಾಯಿತು. ಪ್ರತಿಫಲ ನೀಡಲಿಲ್ಲ. ಆದರು ಹೋರಾಟದ ದಾರಿ ಕೆಳವರ್ಗದವರ ಬದುಕಿನ ಸ್ಥಿತಿಯನ್ನು ಕಂಡು ಮನುಷ್ಯ ಕುಲ ಎಚ್ಚೆತ್ತುಕೊಳುವ ನಿಲುವು ಕಾದಂಬರಿ ಕಟ್ಟಿಕೊಟ್ಟಿದೆ. ದೇವರ ಹೆಸರಿನಲ್ಲಿ ನಡೆಯು ಹರೆಯದ ದಲಿತ ಹೆಂಗಸರ ಬದುಕು ತಿಳಿಸುವಲ್ಲಿ ಭರಮಜ್ಜನ ಮಗಳು ಗೌರಿಯ ಚಿತ್ರಣ, 'ಬಸವಿ' ಪದ್ಧತಿಗೆ ನಿರಾಕರಿಸುವುದು, ಗೌರಿಗಾಗಿ ಹೊಡೆದಾಟ, ಸಾವುನೋವು, ಇವೆಲ್ಲವನ್ನು ಮೀರಿ ನಿಲ್ಲಲು ಮಾಡಿದ ಪ್ರಯತ್ನ ಈ ಎರಡು ಪಾತ್ರಗಳು ಹಂಬಲಿಸುವಂತಹವು ಈ ಕಾದಂಬರಿಯಲ್ಲಿ ತಿಳಿಯುವುದು. ಆದರು ಭರಮಜ್ಜನಿಗಾಗಲಿ, ಗೌರಿಗಾಗಲಿ ನ್ಯಾಯ ಸುಖದ ಬದುಕಿಗಾಗಿ ಸಿಗುವುದಿಲ್ಲ. ಅನ್ಯಾಯವೇ ಗೆದ್ದರು ಬಂಡಾಯದ ಬೀಜ ಬಿತ್ತುವಲ್ಲಿ ಈ ಕಾದಂಬರಿಯು ದಲಿತ ಬಂಡಾಯದ ಹಲವು ಮುಖಗಳನ್ನು ಹೊತ್ತುನಿಂತ ಮಹತ್ವದ ಕಾದಂಬರಿ ಎಂದೇ ಹೇಳಬೇಕು.

ಕುಂ.ವೀ. ಅವರ ಇನ್ನೊಂದು ಕಾದಂಬರಿ ಬೇಲಿಯ ಹೂಗಳು. ಇಲ್ಲಿಯೂ ಕಾದಂಬರಿಕಾರರು ಸಿಟ್ಟು, ಹೋರಾಟದ ಬದುಕನ್ನು ತಿಳಿಸುವರು. ಊಳಿಗಮಾನ್ಯ ಪದ್ಧತಿ ಮತ್ತು ಶ್ರೀಮಂತರ ನೀತಿಯನ್ನು ಈ ಕಾದಂಬರಿಯಲ್ಲಿ ತಿಳಿಸಿದ್ದಾರೆ. ಕರಿಲಿಂಗ ದೊರೆ ನಾರಾಯಣನ ವಿರುದ್ಧ ತಿರುಗಿ ಬೀಳುವುದು ಹೊಸತನದ ಬದುಕಿನ ಹುಡುಕಾಟಕ್ಕೆ ಪ್ರಯತ್ನಿಸಿದರು ಫಲಿಸಲಿಲ್ಲ. ಆದರೆ ಮರಣದಂಡನೆಗೆ ಬಲಿಯಾದ. ಸಿಟ್ಟು ಮನುಷ್ಯನಲ್ಲಿ ಹೇಗೆ ಆವರಿಸುವುದು ಎಂದು ನಾರಾಯಣ ದೊರೆ ಮೇಲೆ ಕರಿಲಿಂಗ ತಾಳಿದ ನಿಲುವಿನ ಪರಿಯನ್ನು ಕಾದಂಬರಿಕಾರರು ಹೀಗೆ ವ್ಯಕ್ತಪಡಿಸುವರು. "ಕರಿಲಿಂಗಗೆ ಸಿಟ್ಟು ಬಂತು ಅವನ ದವಡೆಗಳು ಒಂದಕ್ಕೊಂದು ಮಸೆದು ಕರಕರ ಸದ್ದು ಮಾಡಿದವು. ಆ ಸದ್ದಿಗೆ ನೆರಕೆ ಸಂದಿಯ ಗೂಡಿನಲ್ಲಿ ಗುಬ್ಬಿ ಮಿಥನಕ್ಕೆಚ್ಚರವಾಯಿತು. ಹೆಣ್ಣು ಗುಬ್ಬಿ ಮಗ್ಗಲು ಬದಲಾಯಿಸಿ ಚುಂಚ್‌ಚ ಸದ್ದು ಮಾಡಿತು"(ಕುಂ.ವೀ: 6: 2008). ಇಲ್ಲಿ ಕರಿಲಿಂಗನ ಸಿಟ್ಟು ದೊರೆಯ ಅಟ್ಟಹಾಸದ ವಿರುದ್ಧ ಸಿಡಿದೇಳುವುದು. ಮುಂದೆ ಕರಿಲಿಂಗ ಮರಣದಂಡನೆಗೆ ಬಲಿಯಾಗುವನು ದೊರೆಗೆ ಜಯವಾಗುತ್ತದೆ. ಕರಿಲಿಂಗನ ಮಗ ಕರಿಯ ದೊಡ್ಡವನಾದ ಮೇಲೆ ತಂದೆಗೆ ಆದ ಸ್ಥಿತಿಯನ್ನು ಕಾಡಜ್ಜನಿಂದ ತಿಳಿದು ದೊರೆಯನ್ನು ನಾಶಮಾಡವುದಕ್ಕಾಗಿ ಹೋರಾಟ ಮಾಡುವನು. ಇತನ ಜೊತೆಗೆ ಸಹಾಯಕ್ಕೆ ನಿಲ್ಲುವವಳು ಹೊನ್ನಿ ಕಾದಂಬರಿಯಲ್ಲಿ ತಿಳಿಯುವಂತೆ ಹೋರಾಟದ ಅಲೆಗಳು ಸಂಪ್ರದಾಯದ ವಿರುದ್ಧ ಚಲಿಸುವುದು ತಿಳಿದುಬರುತ್ತದೆ. ಕರಿಯನ ಬಂಡಾಯದಿಂದ ದೊರೆ ಹುಟ್ಟು ಅಡಗಿಸಲು ಸಾಧ್ಯ ಎನ್ನುವುದು ಇಲ್ಲಿ ಕಂಡುಬರುತ್ತದೆ. ಬಂಡಾಯ ಎನ್ನುವುದು ಸಹಜವಾಗಿ ವ್ಯಕ್ತಿಯಲ್ಲಿ ಹೇಗೆ ಹುಟ್ಟುವುದು ಎಂದು ಕರಿಯನಂತಹ ದಿಟ್ಟಪಾತ್ರಗಳನ್ನು ಚಿತ್ರಿಸಿ ಕಾದಂಬರಿಕಾರರು ಬಂಡಾಯದ ನೆಲೆಯನ್ನು ತಿಳಿಸುವರು. ಇಲ್ಲಿ ಹೊನ್ನಿ, ನಾಗವ್ವರಂತ ಹೆಣ್ಣು ಪಾತ್ರಗಳು ಬಂಡೇಳುವುದು ಕಂಡುಬರುತ್ತದೆ.

ಕುಂ.ವೀ.ರವರ ಹಲವು ಕಾದಂಬರಿಗಳಲ್ಲಿ ಬಂಡಾಯದ ಬದುಕನ್ನು ಕಂಡುಬರುತ್ತದೆ. 'ಹನುಮ' ಕಾದಂಬರಿಯಲ್ಲಿ ಕಥಾನಾಯಕ ಹನುಮ ಹೋರಾಟಕ್ಕಿಳಿದಾಗ ನಡೆದ ಸಂಗತಿ ಮತ್ತು ಸಮಾಜದ ಬದಲಾವಣೆಯನ್ನು ತಿಳಿಸುವರು. ಹನುಮನ ಸಿಟ್ಟು, ರೋಷ, ಆವೇಶ, ಹೋರಾಟಗಳೆಲ್ಲವನ್ನು ಹಳ್ಳಿಗಾಡಿನ ಜೀವನದ ನೆಲೆಯಲ್ಲಿ ಮೂಡಿಬಂದಿವೆ. ಜಮೀನ್ದಾರರ ವಿರುದ್ಧ ಬಂಡೇಳುವುದು ಶೋಭಣ್ಣನಂತ ಜಮೀನ್ದಾರ ಮನೆತನದ ಪಾತ್ರಗಳನ್ನು ಸೃಷ್ಟಿಸಿ ಹಳ್ಳಿಯ ಜನರ ಬದುಕಿನಲ್ಲಿ ನಡೆಯುವ ಚಿತ್ರಣ ಮತ್ತು ಅನ್ಯಾಯವಾಗಿ ಗಳಿಸಿದ ಶೋಭಣ್ಣನ ಮನೆಯನ್ನು ಹೊನ್ನಪ್ಪನಾಯಕ, ಕರಿಯರಂತ ಧೈರ್ಯಶಾಲಿ ವ್ಯಕ್ತಿಗಳು ಕೊಳ್ಳೆ ಹೊಡೆಯುವುದು ಇಲ್ಲಿ ನೋಡುತ್ತೇವೆ. ಸಮಾನತೆಗಾಗಿ ಹೋರಾಡುವ ಹಲವು ದೃಶ್ಯಗಳನ್ನು ಕಾದಂಬರಿಕಾರರು ತಿಳಿಸುವರು. ಕುಂ.ವೀ.ಯವರು ಬಂಡಾಯ ಬರಹಗಾರರು ಮತ್ತು ಹೋರಾಟಗಾರರು ಎಂಬುದು ಅವರ ಸಾಹಿತ್ಯದ ಮೂಲಕ ತಿಳಿಯುವುದು. ಐತಿಹಾಸಿಕ ಮತ್ತು ಧಾರ್ಮಿಕ ಆಯಾಮಗಳನ್ನು ಕೆಲವು ಕಾದಂಬರಿಯಲ್ಲಿ ತಿಳಿಸಿರುವರು. ಅದರ ಜೊತೆ ವಾಸ್ತವತೆ ಮತ್ತು ಪ್ಯೂಡಲ್ ವ್ಯವಸ್ಥೆಯನ್ನು ತಮ್ಮ ಸಾಹಿತ್ಯದ ಮೂಲಕ ಹೊರಹೊಮ್ಮಿಸಿದ್ದಾರೆ. ಭಾರತ ದೇಶದ ಬಡತನ, ರೈತನಗೋಳು, ಸಮಾಜದ ಸ್ಥಿತಿಗತಿ, ರಾಜಕೀಯ, ಅಟ್ಟಹಾಸ, ದುಷ್ಟರ ಸದೆಬಡಿತ, ಅಕ್ಷರದ ಅರಿವು, ಯುವಶಕ್ತಿಯ ಹೋರಾಟ ಕುಂ.ವೀ.ರವರ ಸಾಹಿತ್ಯದಲ್ಲಿ ಕಂಡುಬರುತ್ತದೆ. ಯುವಶಕ್ತಿಯ ಹೋರಾಟದ ಬಗ್ಗೆ ಅವರ ಬೇಲಿಯ ಹೂಗಳು, ಪ್ರತಿಧ್ವನಿ, ಕಪ್ಪು, ಹನುಮ ಮುಂತಾದ ಕಾದಂಬರಿಗಳಲ್ಲಿ ದಿಟ್ಟತನದ ಪಾತ್ರಗಳನ್ನು ಸೃಷ್ಟಿಸುವುದರ ಮೂಲಕ ಸಮಾಜದ ಸಮಾನತೆಗೆ ಮತ್ತು ಮನುಷ್ಯ ಜೀವನದ ಸಮ ಬಾಳಿಗೆ ಪ್ರಯತ್ನ ಪಡುವುದು ಕುಂ.ವೀ. ರವರ ಸಾಹಿತ್ಯದಿಂದ ತಿಳಿದುಬರುತ್ತದೆ.

ಹೈದ್ರಾಬಾದ ಕರ್ನಾಟಕದ ಶ್ರೇಷ್ಠ ಬಂಡಾಯ ಸಾಹಿತಿಗಳಲ್ಲಿ ಡಾ.ಚೆನ್ನಣ್ಣ ವಾಲೀಕಾರರಿಗೆ ಮಹತ್ವದ ಸ್ಥಾನವಿದೆ. ಇವರ ಕಾವ್ಯವು ಖಡ್ಗಕ್ಕಿಂತಲೂ ಹರಿತವಾಗಿರುವಂತದು. ಆದರೆ ಕಾದಂಬರಿ ಸಾಹಿತ್ಯದಲ್ಲಿ ಅಷ್ಟೊಂದು ಬಂಡಾಯ ನೆಲೆ ಕಂಡುಬರುವುದಿಲ್ಲ. ಆದರೆ ಬಂಡಾಯಕ್ಕೆ ದಾರಿ ಮಾಡಿಕೊಡುವ ಪ್ರಯತ್ನ ಇವರ ಕಾದಂಬರಿಗಳಲ್ಲಿ ನಡೆದಿದೆ ಎಂದೆ ಹೇಳಬೇಕಾಗುತ್ತದೆ. ಇವರ ಐದು ಕಾದಂಬರಿಗಳಲ್ಲಿ ಹಳ್ಳಿಯ ನಿಜ ಜೀವನದ ಚಿತ್ರಣವಿದ್ದು ಶ್ರೀಮಂತರ ರಾಜಕೀಯ ಜಗಳ, ಹೊಡೆದಾಟ, ಸೇಡು, ಪ್ರತಿರೋಧ, ಹೆಣ್ಣಿಗಾಗಿ ಹೋರಾಟ, ಮಣ್ಣಿಗಾಗಿ ಹೋರಾಟ ಇಂತಹ ಹಲವು ನಿಲುವುಗಳಿಂದ ಕೂಡಿದ ಬರವಣಿಗೆಯೂ ಜನರಲ್ಲಿ ಬಂಡಾಯದ ಬೀಜ ಬಿತ್ತುವಂತಹದಾಗಿದೆ. ಸ್ತ್ರೀ ಪರವಾದ ನೆಲೆಯಲ್ಲಿ ಮೂಡಿಬಂದಿರುವ ಇವರ ಕಾದಂಬರಿಗಳಲ್ಲಿ ಕೆಳವರ್ಗದ ಮಹಿಳೆ ಮತ್ತು ಶೋಷಿತ ಜನಾಂಗ ಯಾವ ಒಬ್ಬ ಶ್ರೀಮಂತರ ವಿರುದ್ಧ ನಿಂತು ಜಯಗಳಿಸುವುದಿಲ್ಲ. ಅಷ್ಟೇ ಅಲ್ಲದೆ ಅನ್ಯಾಯಕೊಳ್ಳಗಾದರು ಪ್ರತಿರೋಧದ ಧ್ವನಿ ಎತ್ತಿ ಹೋರಾಟಕ್ಕಿಳಿಯುವುದಿಲ್ಲ. ಇಲ್ಲಿ ದಲಿತರು, ಸ್ತ್ರೀಯರು, ಶೋಷಿತ ಜನಾಂಗ ಮೇಲ್ವರ್ಗದವರ ತುಳಿತಕ್ಕೆ ಬಲಿಯಾಗಿರುವುದು ಕಂಡುಬರುತ್ತದೆ.

ಒಂದು ಹೆಣ್ಣಿನ ಒಳಜಗತ್ತು ಕಾದಂಬರಿಯಲ್ಲಿ ಗಂಡ ಸತ್ತ ರತ್ನಾ ಆಂತರಿಕವಾಗಿ ತಳಮಳಿಸುತ್ತಿದ್ದಳು. ತನ್ನ ವಿರಹದ ವೇದನೆಯನ್ನು ಸಹಿಸದೆ ಕುದಿಯುತ್ತಿದ್ದಳು. ಸಂಪ್ರದಾಯದ ವಿರುದ್ಧ ಧ್ವನಿ ಎತ್ತುವ ಧೈರ್ಯ ಅವಳಿಗಿಲ್ಲ. ಆದರು ಆಳುಮಗ ಮಲ್ಯಾನೊಂದಿಗೆ ಜೋರಾಜೂಲುಮೆಯಿಂದ ಉಪಾಯಮಾಡಿ ದೈಹಿಕ ಸಂಬಂಧ ಬೆಳೆಸಿದಳು. ಆದರೆ ಅಣ್ಣನ ವಿರುದ್ಧ ಸಿಡಿದೇಳುವ ಧೈರ್ಯ ಅವಳದಾಗಲಿಲ್ಲ. ಮಲ್ಯಾನನ್ನು ಸಂಗಣ್ಣಗೌಡ ಕೊಲೆ ಮಾಡಿದಾಗ ರತ್ನಾ ತಾನು ಆತ್ಮಹತ್ಯೆ ಮಾಡಿಕೊಳ್ಳುವಳು. ಇಲ್ಲಿ ತಪ್ಪು ಯಾರದೆ ಆದರು ಕೆಳವರ್ಗದವರು ಮತ್ತು ಸ್ತ್ರೀಯರೆ ತಪ್ಪಿತಸ್ಥರಾಗಿ ಕಂಡುಬರುತ್ತಾರೆ. ಸಂಗಣ್ಣಗೌಡನ ವಿರುದ್ಧ ಮಲ್ಯಾ ಆಗಲಿ ತಂಗಿ ರತ್ನ ಆಗಲಿ ಬಂಡೆಳಲಿಲ್ಲ. ಬದಲಾಗಿ ಆತ್ಮಹತ್ಯೆ ಮಾಡಿಕೊಂಡದ್ದು ನೋಡುತ್ತೇವೆ. ಒಂದು ಕಡೆ ವಾಲೀಕಾರರು ಕಾದಂಬರಿಯಲ್ಲಿ ದಲಿತರು ತಮ್ಮ ಮೇಲಾದ ಅನ್ಯಾಯವನ್ನು ಸಹಿಸಿಕೊಂಡು ಜನರಿಗೆ ಉತ್ತರಿಸುವ ಪರಿಯನ್ನು ನಾವು ಹೊಲೆಯರು ಎಂದು ತಿಳಿಸುತ್ತಾ ಈ ರೀತಿ ಧ್ವನಿ ಎತ್ತುವರು

"ಹೊಲೆಯರು ನಾವು ಹೊಲೆಯರು
ಎಂಥ ಹೊಲೆಯರು
ಹೊಲೆಯೊಳಗೆ ಹುಟ್ಟಿಬಂದು
ಕುಲಛಲ ಮೇಲು ಅನುವವರು ॥ ಪ ॥
ಮಲಮೂತ್ರದೊಳು ಬಂದು
ಶೀಲ ಬಹಳ ಮಾಡುವವರು
ಶೂಲಿ ಪಾದದ ಧ್ಯಾನ ನಿಲ್ಲಿಸಿದವರು ॥ 1 ॥
ಮುಟ್ಟಿನಲ್ಲಿ ಹುಟ್ಟಿ ಬಂದು
ಮುಟ್ಟಿಗಿ ತಟ್ಟಿಗಿ ಅನುವವರು
ಹುಟ್ಟಿಸಿದ ಶಿವನ ಕೂನ ಅರಿಯದವರು"

(ವಾಲೀಕಾರ: 67,68: 2002) ಮಲ್ಯಾನ ಮೇಲಾದ ಅನ್ಯಾಯವನ್ನು ತಿಳಿಸುವಲ್ಲಿ ಕಾದಂಬರಿ ಕಾರರು ಮಾಡಿದ ಪ್ರತಿರೊಧ ಇದಾಗಿದೆ. ಆದರೆ ಆ ಪಾತ್ರದ ಮೂಲಕ ಸಮಾಜದಲ್ಲಿ ನಡೆದ ಅನ್ಯಾಯವನ್ನು ಪ್ರತಿಭಟಿಸುವ ಮನಸ್ಸು ಮಾಡಿಸುವುದಿಲ್ಲ. ಮೇಲು–ಕೀಳು ಎನ್ನುವ ನೆಲೆಯನ್ನು ಕಾದಂಬರಿಯಲ್ಲಿ ಎದ್ದು ಕಾಣುತ್ತದೆ.

ವಾಲೀಕಾರರ 'ಕೋಟೆಬಾಗಿಲು' ಕಾದಂಬರಿಯಲ್ಲಿ ಮರೆಮ್ಮನೆಂಬ ಕೆಳವರ್ಗದ ಮಹಿಳೆಯನ್ನು ಮೇಲ್ವರ್ಗದ ಗೌಡ ರಾಮಗೊಂಡ ಹೊಂಚುಹಾಕಿ ಶೀಲ ಹರಣ ಮಾಡುವನು ಮರೆಮ್ಮ ಈತನ ವಿರುದ್ಧ ಧ್ವನಿ ಎತ್ತುವ ಧೈರ್ಯ ಮಾಡದೆ ಅಸಹಾಯಕತೆಯಿಂದ ಹೊಳೆ ಹಾರಿ ಆತ್ಮಹತ್ಯೆ ಮಾಡಿಕೊಂಡಳು. ಅಕ್ಕ ಆತ್ಮಹತ್ಯೆ ಮಾಡಿಕೊಂಡದ್ದು ರಾಯಣ್ಣ ಕಂಡಿದ್ದನು. ಆದರೆ ಆತ ಇನ್ನು ಚಿಕ್ಕವನ್ನು ಮನೆಗೆ ಬಂದು ತಾಯಿಯ ಮುಂದೆ ಅಕ್ಕನಿಗೆ ಆದ ಗತಿಯನ್ನು ತಿಳಿಸಿದಾಗ ತಳವಾರ ರಾಯಣ್ಣನ ನಾಲ್ಕು ಜನ ಕಾಕಂದಿರರು ಯಮದೂತರಂತೆ ರಾಮಗೊಂಡನ ಮನೆಗೆ ನುಗ್ಗಿ ಹಣ್ಣಗಾಯಿ ನೀರುಗಾಯಿ ಆಗುವಂತೆ ಬಡಿಯುವರು. ಇಲ್ಲಿ ಮಾಲೀಗೌಡನ ವಿರುದ್ಧ ತಳವಾರ ಜನಾಂಗದ ಪ್ರತಿಭಟನೆಯನ್ನು ಕಂಡುಬರುತ್ತದೆ. ಮುಂದೆ ರಾಯಣ್ಣನು ತನ್ನ ಕುಟುಂಬದ ಮೇಲಾದ ಅನ್ಯಾಯದ ವಿರುದ್ಧ ದೊಡ್ಡವನಾದ ಮೇಲೆ ಧ್ವನಿ ಎತ್ತುವುದನ್ನು ವಾಲೀಕಾರರು ತಿಳಿಸಿದ್ದಾರೆ. ಈ ಕಾದಂಬರಿಯಲ್ಲಿ ಸ್ವಲ್ಪಮಟ್ಟಿಗೆ ಬಂಡಾಯ, ಹೋರಾಟ, ಸಿಟ್ಟು, ಸೇಡಿಗೆ ಸೇಡು ಎನ್ನವಂತಹದು ಕಂಡುಬರುತ್ತದೆ. ರಾಯಣ್ಣ ಗೌಡ, ಸಾಹುಕಾರ ಎನ್ನುವ ಯಾವ ಗೌರವವು ಕೊಡದೆ ಹೋರಾಟಕ್ಕಿಳಿಯುವುದು ಕಾದಂಬರಿಯಿಂದ ತಿಳಿದು ಬರುತ್ತದೆ. ರಾಯಣ್ಣನನ್ನು ಮುಖ್ಯವಾಗಿ ಇಟ್ಟುಕೊಂಡು ಗೌಡರ ದರ್ಪವನ್ನು ಮೆಟ್ಟಿನಿಲ್ಲಲು ಪ್ರಯತ್ನ ಮಾಡಿರುವುದು ಕಾದಂಬರಿಯಲ್ಲಿ ಚಿತ್ರಿಸಲಾಗಿದೆ. ಈ ಕಾದಂಬರಿಯಲ್ಲಿ ಕೆಳವರ್ಗದವರಿಗೆ ಸಿಟ್ಟು ಬಂದರೆ ಮತ್ತು ತಿರುಗಿ ನಿಂತರೆ ಎಂಥಹ ಅನಾಹುತಗಳು ಆಗುತ್ತವೆ ಎನ್ನುವುದು ರಾಯಣ್ಣ ಮತ್ತು ಮಾಲಿಗೌಡರ, ಸಂಗಣ್ಣಗೌಡ, ದ್ಯಾವಗೊಂಡರ ಸ್ಥಿತಿಯನ್ನು ನೋಡಿದಾಗ ಅರಿವಿಗೆ ಬರುತ್ತದೆ. ಚೆನ್ನಣ್ಣ ವಾಲೀಕಾರರು ಈ ಕಾದಂಬರಿಯಲ್ಲಿ ಕೆಳವರ್ಗದ ಜನರ ಬಂಡಾಯದ ಹೊರಾಟವನ್ನು ತಿಳಿಸುವಲ್ಲಿ ಮಹತ್ವದ ನಿಲುವು ತಾಳಿದ್ದಾರೆ. ಗ್ರಾಮೀಣ ಪ್ರದೇಶದಲ್ಲಿ ಶತ–ಶತಮಾನಗಳಿಂದಲೂ ನಡೆದುಕೊಂಡು ಬಂದಿರುವ ಶೋಷಣೆಯನ್ನು ರಾಯಣ್ಣನಂತ ಪಾತ್ರಗಳನ್ನು ಚಿತ್ರಿಸಿ ಪ್ರತಿಭಟನೆಗೆ ಇಳಿಸಿರುವುದು ಗೋಚರಿಸುತ್ತದೆ.

'ಹುಲಿಗೆಮ್ಮ' ಕಾದಂಬರಿಯಲ್ಲಿ ಹುಲಗಿ ಅನ್ಯಾಯ ಅತ್ಯಾಚಾರಕ್ಕೆ ಒಳಗಾದರು ಪ್ರತಿಭಟಿಸುವ ಧೈರ್ಯ ಮಾಡುವುದಿಲ್ಲ. ಬದಲಾಗಿ ಸಮಯ ಸಂದರ್ಭಕ್ಕೆ ಹೊಂದಿಕೊಳ್ಳಲು ಪ್ರಯತ್ನಿಸಿ ಕೊನೆಗೆ ಬೀದಿ ಸೂಳೆಯಾಗಿ ಜೀವನ ನಡೆಸುವಳು. ಈ ಕಾದಂಬರಿಯಲ್ಲಿ ಹೆಣ್ಣು ನರಕ ಯಾತನೆ ಅನುಭವಿಸಿದರು ಗಂಡಿನ ವಿರುದ್ಧ ಧ್ವನಿ ಎತ್ತಿ ನಿಲ್ಲುವುದಿಲ್ಲ ಕೆಳವರ್ಗದ ಹೆಣ್ಣು ಮಕ್ಕಳನ್ನು ಮೇಲ್ವರ್ಗದವರು ಕಾಣುವ ರೀತಿಯನ್ನು ಈ ಕಾದಂಬರಿ ತಿಳಿಸುತ್ತದೆ. ಇದೇ ರೀತಿ ಗ್ರಾಮ ಭಾರತ ಕಾದಂಬರಿಯಲ್ಲಿಯೂ ಹಳ್ಳಿಯ ಜೀವನ ಚಿತ್ರಣದ ಜೊತೆ ಬಂಡಾಯದ ನಿಲುವು

ತಿಳಿಸುವರು. ಗೌಡನ ವಿರುದ್ಧ ಕೆಳವರ್ಗದ ಜನರು ತಿರುಗಿ ನಿಲುವುದು ಸೇಡಿಗೆ ಸೇಡು ತಿರಿಸಿಕೊಳ್ಳುವುದು 'ಮುಯಿಗೆ ಮೂಯಿ' ಎನ್ನುವಂತೆ ಕಾದಂಬರಿಯಲ್ಲಿ ಚಿತ್ರಿಸಲಾಗಿದೆ.

ಚೆನ್ನಣ್ಣ ವಾಲೀಕಾರರ ಹಲವು ಕಾದಂಬರಿಗಳಲ್ಲಿ ತಿಳಿದು ಬರುವಂತೆ ಕೆಳವರ್ಗದ ಹೆಣ್ಣು ಅನ್ಯಾಯ, ಅತ್ಯಾಚಾರಕ್ಕೆ ಒಳಗಾಗುತ್ತಾಳೆ ನಿಜ. ಆದರೆ ಪ್ರತಿಭಟಿಸುವ ಶಕ್ತಿ ಅವಳಿಗಿಲ್ಲ. ತನಗಾದ ಶೋಷಣೆಯ ವಿರುದ್ಧ ಸೆಣಿಸುವಂತೆ ಅವಳು ಸಾಹಸದ ಕಾರ್ಯ ಮಾಡುವುದಿಲ್ಲ. ಬದಲಾಗಿ ತನ್ನ ಅಸಹಾಯಕತೆಯ ಬದುಕು ನಡೆಸಿರುವುದು ಕಂಡುಬರುತ್ತದೆ. ಅನ್ಯಾಯ ಎದುರಿಸದ ಹೆಣ್ಣು ತನ್ನ ಗೌರವಕ್ಕೆ ದಕ್ಕೆ ಬಂದಾಗ ಆತ್ಮಹತ್ಯೆ ಒಂದೇ ಅವಳ ಕಣ್ಣು ಮುಂದೆ ಬರುತ್ತದೆ. ಕಾದಂಬರಿಕಾರರು ಚಿತ್ರಿಸುವಂತೆ ಹೆಣ್ಣು ಆತ್ಮಹತ್ಯೆ ಮಾಡಿಕೊಳ್ಳುವುದು ಒಂದೇ ಮಾರ್ಗವಾಗಿದೆ. ಅದರ ಬದಲಾಗಿ ಗಂಡಿನ ಮೇಲೆ ಸಿಟ್ಟು, ಸೇಡು, ಪ್ರತಿರೋಧ ಮಾಡುವ ನಿಲುವು ತಾಳದಿರುವುದು ಕಂಡುಬರುವುದು. ಕೆಲವು ಸಂದರ್ಭದಲ್ಲಿ ಹುಲಿಗೆಮ್ಮ, ಮರೆಮ್ಮ, ಮಲಕವ್ವರಂಥ ಪಾತ್ರಗಳು ಬಂಡಾಯದ ಪ್ರವೃತ್ತಿಗೆ ಇಳಿಯುತ್ತವೆ ಆದರೆ ಸೆಣಸುವ ಧೈರ್ಯ ಮಾಡುವುದಿಲ್ಲ. ಇದು ಹಿಂದಿನ ಕಾಲದಲ್ಲಿ ಹೆಣ್ಣು ತನ್ನ ತನ್ನವನ್ನು ಹೇಗೆ ಗುರುತಿಸಿಕೊಂಡಿದ್ದಳು ಎನ್ನುವುದಕ್ಕೆ ಸಾಕ್ಷಿಗಳಾಗಿವೆ. ಕೆಲವು ಕಡೆಗಳಲ್ಲಿ ಮೇಲ್ವರ್ಗದ ಹೆಣ್ಣು ಮಕ್ಕಳು ಕೆಳವರ್ಗದ ಪುರುಷರ ಸರಸ ಸಲ್ಲಾಪದಲ್ಲಿ ನಿಂತರು ತಪ್ಪು ಕಂಡು ಬರುವುದು ಕೆಳವರ್ಗದ ವ್ಯಕ್ತಿಗಳದೆ. ಮೇಲ್ವರ್ಗದವರ ವಿರುದ್ಧ ಸೆಣಸಾಡದೆ ಅವರ ದಬ್ಬಾಳಿಕೆಗೆ ಬಲಿಯಾಗಿರುವುದು ಅರಿಯುತ್ತೇವೆ. ಆದರು ವಾಲೀಕಾರರ ಕಾದಂಬರಿಗಳಲ್ಲಿ ಪ್ರತಿಭಟನೆಯನ್ನು ಕಂಡುಬರುತ್ತದೆ. ಪ್ರತಿಭಟನೆಯ ಜೊತೆಯಲ್ಲಿ ಹೋರಾಟವು ಗೋಚರಿಸುವಂತದು. ಹುಟ್ಟು ಹೋರಾಟಗಾರರಾದ ಚೆನ್ನಣ್ಣ ವಾಲೀಕಾರರ ಸಾಹಿತ್ಯವನ್ನು ಗಮನಿಸಿದಾಗ ಕಾವ್ಯದಂತೆ ಕಾದಂಬರಿಯಲ್ಲಿ ಬಂಡಾಯದ ಮನೋಧರ್ಮ ಅಷ್ಟು ಗಟ್ಟಿ ನಿಲುವಿನಿಂದ ಮೂಡಿರುವುದಿಲ್ಲ ಎಂದು ಹೇಳಬಹುದು. ಅವರ ಕಾವ್ಯ ಹರಿತವಾದ ಖಡ್ಗದಂತೆ ದಲಿತ ಬಂಡಾಯದ ಹೊಳಪು ಪ್ರಕಾಶಮಾನವಾಗಿ ಬೆಳಕು ಚೆಲ್ಲುವಂತದು. ಕನ್ನಡ ಸಾಹಿತ್ಯವನ್ನು ಅಧ್ಯಯನ ಮಾಡುವ ಸಂದರ್ಭದಲ್ಲಿ ಹೆಣ್ಣಿನ ಚಿತ್ರಣದ ವಿಷಯ ಬಂದಾಗ ಹೆಣ್ಣಿನ ಬಗ್ಗೆ ವಿಶ್ಲೇಷಣಾತ್ಮಕವಾಗಿ ಬರೆದವರಲ್ಲಿ ಚೆನ್ನಣ್ಣ ವಾಲೀಕಾರರಿಗೆ ವಿಶೇಷ ಸ್ಥಾನ ದೊರೆಯುತ್ತದೆ. ವಾಲೀಕಾರರು ಹೆಣ್ಣನ್ನು ಪತಿವ್ರತೆಯೆಂದು, ಗೃಹಿಣಿಯೆಂದು, ತಾಯಿ ಎಂದು, ಮಗಳು ಎಂದು, ಸೇವಕಿ ಎಂದು, ಪ್ರಿಯತಮೆ ಎಂದು ಬೇರೆ–ಬೇರೆ ರೂಪಗಳನ್ನು ಕೊಟ್ಟು ಗೌರವಿಸಿರುವುದು ಇವರ ಸಾಹಿತ್ಯದಿಂದ ಅರಿಯುತ್ತೇವೆ

ಶಾಂತರಸರ ಸಣ್ಣಗೌಡಸಾನಿ ಕಾದಂಬರಿಯಲ್ಲಿ ಮೂಡಿಬಂದಿರುವಂತೆ ಕೆಳವರ್ಗದ ಜಾತೀಗೆರ ಜನಾಂಗದ ಮತ್ತು ಮಹಿಳೆಯರ ದುರಂತಮಯ ಚಿತ್ರಣ ಹಳ್ಳಿಯ ಬದುಕಿನ ಕಥೆ ಮತ್ತು ಪ್ಯೂಡಲ್ ವ್ಯವಸ್ಥೆಯ ಒಳಗಡೆ ನಡೆಯುವ ಜಿದ್ದಾ–ಜಿದ್ದಿ ಪೈಪೋಟಿಯಿಂದ ಕೂಡಿದ ವೈಷಮ್ಯದ ಕಲಹಗಳು ಈ ಕಾದಂಬರಿಯಲ್ಲಿ ತಿಳಿದುಬರುತ್ತವೆ. ಹಿಂದಿನ ಕಾಲದಲ್ಲಿ ಜಾತೀಗೆರ ಜನಾಂಗದವರ ಬಗ್ಗೆ ಜನರಲ್ಲಿ ಇದ್ದ ಭಾವನೆಯನ್ನು ತಿಳಿಸುವಲ್ಲಿ ಕಾದಂಬರಿಕಾರರು ಮಹತ್ವದ ಪಾತ್ರವಹಿಸಿದ್ದಾರೆ. ತಮ್ಮ ಹೊಟ್ಟೆಪಾಡಿಗಾಗಿ ನಾಟಕವಾಡುತ್ತಿದ್ದ ಜಾತಿಗೇರ ಜನಾಂಗದ ಸುಂದರ ಮಹಿಳೆಯರ ಬದುಕು ದುರಂತಮಯವಾಗಿತ್ತು. ಊರಿನ ಶ್ರೀಮಂತ ಗೌಡ, ಸಾಹುಕಾರರು ಜಾತಿಗೇರ ಸುಂದರ ಸ್ತ್ರೀಯರನ್ನು ಬಯಸಿದರೆ ಒಪ್ಪಿಕೊಳ್ಳಬೇಕು. ಅಷ್ಟೆ ಅಲ್ಲದೆ ಕಾಯಂ ಆಗಿ ಇಟ್ಟುಕೊಳ್ಳುವ ರೂಢಿಯು ಈ ಕಾದಂಬರಿಯಲ್ಲಿ ಮೆಹಬೂಬ ಜಾನ್‌ಳಂತ ಪಾತ್ರಗಳನ್ನು ಸೃಷ್ಟಿಸಿ ಶಾಂತರಸರು ತಿಳಿಸುವರು. ಒಂದು ಹೆಣ್ಣಿಗಾಗಿ ನಡೆದ ಜಗಳದಂತೆ ಈ ಕಾದಂಬರಿಯಲ್ಲಿ ಕಂಡು ಬಂದರು ಮನುಷ್ಯತ್ವದ ನೆಲೆಯನ್ನು ಮೀರಿನಿಂತಿರುವ ಅಧಿಕಾರಶಾಹಿವರ್ಗ ಮತ್ತು ಶ್ರೀಮಂತರ ರೀತಿ–ನೀತಿಯನ್ನು ಕಾದಂಬರಿ ತಿಳಿಸುವುದು. ಹೆಣ್ಣು ಅಸಾಯಕತನದಿಂದ ಬದುಕು ನಡೆಸಿರುವುದು ಮೇಲ್ವರ್ಗದವರ ಹಿಡಿತಕ್ಕೆ ಸಿಕ್ಕು ತತ್ತರಿಸುವುದು ಜಾತಿಗೇರ ಜನಾಂಗದ ಮಾಬಿಯಿಂದ ತಿಳಿದುಬರುತ್ತದೆ. ಈ ಕಾದಂಬರಿಯಲ್ಲಿ ಅಧಿಕಾರಶಾಹಿ ವಿರುದ್ಧವಾಗಲಿ, ಪ್ಯೂಡಲ್ ವ್ಯವಸ್ಥೆಯ ವಿರುದ್ಧವಾಗಲಿ ಬಂಡಾಯ ಎಳುವಂತಹ ಯಾವ ಪಾತ್ರಗಳ ಚಿತ್ರಣವನ್ನು ಕಂಡುಬರುವುದಿಲ್ಲ. ಆದರೆ ಕಾದಂಬರಿ ಓದುಗರಿಗೆ ಬಂಡಾಯದ ಮನೋಧರ್ಮ ಬೆಳೆಸುವಲ್ಲಿ ಶಾಂತರಸರು ಸೃಷ್ಟಿಸಿದ ಕಾದಂಬರಿಯೂ ಕನ್ನಡ ಬಂಡಾಯ ಸಾಹಿತ್ಯಕ್ಕೆ ಮಹತ್ವದ ಕೊಡುಗೆಯಾಗಿದೆ.

ಬಿ.ಟಿ. ಲಲಿತಾನಾಯಕರವರು ಬಂಜಾರ ಸಮಾಜದ ಲಂಬಾಣಿ ತಾಂಡಾಗಳ ಜನ ಜೀವನವನ್ನು ತಿಳಿಸುವಲ್ಲಿ ಗತಿ ಕಾದಂಬರಿಯೂ ಅರಿವಿಗೆ ಬರುತ್ತದೆ. ಈ ಕಾದಂಬರಿಯಲ್ಲಿ ಬಂಡಾಯದ ಬದುಕು ತಿಳಿಯುವುದು. ಗಂಡನ ಅನ್ಯಾಯದ ವಿರುದ್ಧ ನಿಲ್ಲುವ ಸೋನಿ, ಲಂಬಾಣಿ ಸಂಪ್ರದಾಯ ಕಡೆಗಣಿಸಲು ಪ್ರಯತ್ನಿಸುವ ಲಚ್ಚಿ, ತಾಂಡಾದಲ್ಲಿ ಅಕ್ಷರ ಬೀಜ ಬಿತ್ತಲು ಪ್ರಯತ್ನಿಸುವ ಚಂದು ಇಂತ ಹಲವು ನೆಲೆಗಳನ್ನು ನೋಡಿದಾಗ ಬಂಡಾಯವನ್ನು ಹೊತ್ತುಕೊಂಡು ಜೀವಿಸುವದು ಜೀವನದ ಗುರಿ ಎಂದು ಗಟ್ಟಿಮನಸ್ಸಿನಿಂದ ನಿಲ್ಲುವ ಪಾತ್ರಗಳನ್ನು ಬಿ.ಟಿ. ಲಲಿತಾನಾಯಕರು ಚಿತ್ರಿಸಿದ್ದು ನೋಡುತ್ತೇವೆ. ಇವರ ಕಾದಂಬರಿಯಲ್ಲಿ ಅನ್ಯಾಯದ ವಿರುದ್ಧ ಧ್ವನಿ ಎತ್ತಿ ನಿಲ್ಲುವ ದಿಟ್ಟ ಮಹಿಳೆಯರ ಪಾತ್ರ ಕಂಡು ಬರುವುದು. ಮಹಿಳೆಯೂ ಗಂಡಸರಿಗಿಂತ ಕಡಿಮೆ ಅಲ್ಲ. ಅವಳಿಗೂ ಜೀವನ ಸ್ವಾತಂತ್ರದ ಹಕ್ಕು ಇದೆ ಎಂದು ಸಾರಿರುವುದು ನೋಡುತ್ತೇವೆ. ಹೆಣ್ಣು ತನಗಾಗಿ ಒಂದು ನೆಲೆಯನ್ನು ಕಂಡುಕೊಳ್ಳಲು ಹೋರಾಡುವುದು ಸೋನಿ ಮತ್ತು ಲಚ್ಚಿಯರ ಪಾತ್ರಗಳು ತಿಳಿಸುತ್ತವೆ. ಇಲ್ಲಿ ಯಜಮಾನ ಸಂಪ್ರದಾಯದ ದಬ್ಬಾಳಿಕೆಯನ್ನು ಮೆಟ್ಟಿ ನಿಲ್ಲುವಂತಹ ಹಲವು ಸಂಗತಿಗಳು ಕಾದಂಬರಿಯಲ್ಲಿ ಮೂಡಿ ಬಂದಿವೆ.

ಹೈದ್ರಾಬಾದ ಕರ್ನಾಟಕದ ಹಲವು ಬಂಡಾಯ ಬರಹಗಾರರಲ್ಲಿ ಗೀತಾ ನಾಗಭೂಷಣರ ಸ್ಥಾನ ಅತ್ಯಂತ ಮಹತ್ವದಾಗಿದೆ. ಸ್ತ್ರೀಪರ ಧೋರಣೆಯನ್ನು ಚಿತ್ರಿಸುವಲ್ಲಿ ಅವರು ತಾಳಿದ ನಿಲುವು ನೋಡಿದರೆ ಕಾದಂಬರಿ ಓದುಗರಿಗೊಂದು ದಾರಿದೀಪವಾಗಬಲ್ಲವುಗಳಾಗಿವೆ. ಗೀತಾ ನಾಗಭೂಷಣರ ಕಾದಂಬರಿ ಸಾಹಿತ್ಯವನ್ನು ನೋಡಿದರೆ ಹೈದ್ರಾಬಾದ ಕರ್ನಾಟಕಕ್ಕೆ ಸೀಮಿತವಾಗಿರದೆ ಇಡಿ ಕನ್ನಡ ಸಾಹಿತ್ಯದ ಕಾದಂಬರಿ ಕ್ಷೇತ್ರಗೆ ಸ್ಪೂರ್ತಿದಾಯಕವಾದವುಗಳಾಗಿವೆ. ಗೀತಾ ನಾಗಭೂಷಣರ ಕಾದಂಬರಿ ಕ್ಷೇತ್ರವನ್ನು ಗಮನಿಸಿ ಡಾ. ಚೆನ್ನಣ್ಣ ವಾಲೀಕಾರರು ಈ ರೀತಿಯಾಗಿ ವಿಂಗಡಿಸಿದಾರೆ. "ಇಲ್ಲಿಯ ತನಕ ಬಂದಿರುವ ಇವರ ಕಾದಂಬರಿಗಳನ್ನು ಎರಡು ಭಾಗವಾಗಿ ವಿಂಗಡಿಸಬಹುದಾಗಿದೆ. ಮಹಾಮನೆಯಿಂದ ಹಸಿಮೌಂಸ ಮತ್ತು ಹದ್ದುಗಳವರೆಗಿನ ಕೃತಿಗಳು ಸ್ಥಳೀಯ ಕಾದಂಬರಿಗಳಾದರೆ ಧುಮ್ಮಸದಿಂದ ಬದುಕಿನವರೆಗೆ ಬಂದ ಕೃತಿಗಳು ಲೋಕ ಕಾದಂಬರಿಗಳಾಗಿರುವವು. ಮೊದಲನೆಯದರಲ್ಲಿ ಊಳಿಗಮಾನ್ಯ ಪದ್ಧತಿಯ ಜನಗಳಾದ ಗೌಡ, ಕುಲಕರ್ಣಿ, ಸಾಹುಕಾರ, ಊರಿನ ಮುಖಂಡ, ಹಣವಿದ್ದ, ಅಧಿಕಾರವಿದ್ದ ಜನಗಳ ದಬ್ಬಾಳಿಕೆ, ಹೆಣ್ಣು ಶೋಷಣೆಗೀಡಾದದ್ದು ಇದ್ದರೆ. ಎರಡನೆಯದರಲ್ಲಿ ಜೀವನದ ಎಲ್ಲಾ ಸಮಸ್ಯೆಗಳಲ್ಲಿ ಹೆಣ್ಣು ಸಿಕ್ಕು ಬಳಲಿ ಬೆಂಡಾದದ್ದು ಕಾಣುತ್ತದೆ"(ವಾಲೀಕಾರ: 263: 2005). ಗೀತಾ ನಾಗಭೂಷಣರ ಹಲವು ಕಾದಂಬರಿಯಲ್ಲಿ ಬಂಡಾಯದ ಹೋರಾಟ ಕಂಡು ಬರುತ್ತದೆ. ಬಂಡಾಯ ಎನ್ನುವುದು ಪುರುಷ್ಯನಿಗೆ ಅಷ್ಟೆ ಸೀಮಿತವಾಗಿರದೆ ಕೆಳವರ್ಗದ ಸ್ತ್ರೀಯರು, ಪುರುಷನ ವಿರುದ್ಧ,

ಅನ್ಯಾಯದ ವಿರುದ್ಧ, ತನ್ನ ಸ್ಥಾನಮಾನಕ್ಕಾಗಿ ಸಮಾಜದ ವಿರುದ್ಧ ಬಂಡಾಯ ಸಾರುವುದು ಧುಮ್ಮಸ್ಸು, ದಂಗೆ ಮತ್ತು ಬದುಕು ಕಾದಂಬರಿಗಳಿಂದ ತಿಳಿದು ಬರುತ್ತದೆ.

ಧುಮ್ಮಸು ಕಾದಂಬರಿಯ ಕಥಾನಾಯಕಿ ಸೋನಿ ಇಕೆ ಕೆಳವರ್ಗದ ಸಿನಿಂಗಪ್ಪನ ಮಗಳು. ಸಿನಿಂಗಪ್ಪ ಹೆಂಡತಿ ಸತ್ತರು ಮಗಳ ಮೇಲಿನ ಮಮತೆಯಿಂದ ಎರಡನೆ ಮದುವೆಯಾಗದೆ ಮಗಳನ್ನು ಅಂಗೈಯಲ್ಲಿ ಹಿಡಿದು ಜೋಪಾನ ಮಾಡಿದನು. ಅಪ್ಪನ ಅತಿಯಾದ ಮಮತೆಯಲ್ಲಿ ಅತ್ಯಂತ ಧೈರ್ಯ ಮತ್ತು ದಿಟ್ಟತನದಿಂದ ಸೋನಿ ಬೆಳೆದಿದಳು. ಸೋನಿ ಮಲ್ಲೇಶಿಯನ್ನು ಪ್ರೀತಿಸಿ ಮದುವೆಯಾಗುವವಳಿದ್ದಳು. ಇದಕ್ಕೆ ಸಿನಿಂಗಪ್ಪನ ಒಪ್ಪಿಗೆಯು ಇತ್ತು. ಮದುವೆಯನ್ನು ಅದ್ದೂರಿಯಾಗಿ ಮಾಡಲು ಎಲ್ಲಾ ಸಿದ್ಧತೆಗಳು ಮರಗವ್ವ ದೇವಿಯ ಗುಡಿಯ ಎದುರಗಡೆ ನಡೆಸಿದರು. ಅಂತದರಲ್ಲಿ ಡ್ರೈವರ ಮಲ್ಲೇಶಿ ಮದುವೆ ಎರಡು ದಿನ ಇರುವಾಗಲೆ ದುರ್ಮರಣಕ್ಕೆ ಈಡಾದ ತಾಪತಾಳದ ಸಿನಿಂಗಪ್ಪ ಉರುಲು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡನು. ಸೋನಿ ಮತ್ತು ಮಲ್ಲೇಶಿಯರ ಪ್ರಣಯದಿಂದ ಸೋನಿ ಗರ್ಭಿಣಿಯಾಗಿದಳು. ಆ ಸಮಯದಲ್ಲಿ ಹೊಟ್ಟೆಯಲ್ಲಿನ ಕೂಸುತಗೆಸಿ ಹಾಕಲು ಹೇಳಿದಾಗ ದಿಟ್ಟತನದಿಂದ ತಿರಸ್ಕರಿಸಿದಳು. ಇದು ನನ್ನ ಪ್ರೀಯತಮ ಮಲ್ಲೇಶಿಯ ಪ್ರೇಮದ ಕಾಣಿಕೆ. ಇದನ್ನು ತೆಗೆಯಲಾರೆ ಎಂದು ಹೋರಾಟಕ್ಕಿಳಿದಳು. ಸೋನಿಯ ಧೈರ್ಯದ ಬಗ್ಗೆ ಮಾತನಾಡುವ ಸಂದರ್ಭದಲ್ಲಿ ಇನ್ನೊಂದು ವಿಷಯ ಅರಿವಿಗೆ ಬರುತ್ತದೆ. ತಂದೆ ಆತ್ಮಹತ್ಯೆ ಮಾಡಿಕೊಂಡು ಸತ್ತಾಗ ಊರ ಜನರು ಪೋಲಿಸರಿಗೆ ತಿಳಿಸದೆ ಮುಚ್ಚುವ ವೇಳೆಯಲ್ಲಿ ಚಂಡಿಯಂತೆ ಸೋನಿ ಗುಡುಗಿದಳು. ಇವಳ ವಿಕಾರತೆಗೆ ನೆರೆದ ಜನರೆಲ್ಲ ದಂಗಾಗಿದ್ದರು ಇಲ್ಲಿ ಗೀತಾ ನಾಗಭೂಷಣರು ತಿಳಿಸುವಂತೆ ಕೆಳವರ್ಗದ ಮಹಿಳೆಯಾದ ಸೋನಿ ಸಾರುವ ಬಂಡಾಯ ನೊಂದ ಮಹಿಳೆಯರಿಗೆ ದಾರಿದೀಪವಾಗುವಂತಹದ್ದಾಗಿದೆ. ನೆರೆದ ಪಂಚರು, ಗೌಡರು, ಕುಲಕರ್ಣಿಯರಿಗೆ ಸೋನಿ ತಿರುಗಿ ನಿಂತಿರುವುದು ನೋಡಿದರೆ ಕಾದಂಬರಿಯ ನಾಯಕಿ ಸೋನಿಯ ಪಾತ್ರ ಸತ್ವಯುತವಾದದ್ದಾಗಿದೆ ಎಂದು ಅರಿವಾಗುತ್ತದೆ.

ಗೀತಾ ನಾಗಭೂಷಣರ ಕಾದಂಬರಿಗಳಲ್ಲಿ ಹೆಚ್ಚಾಗಿ ಸ್ತ್ರೀಪರವಾದ ಕಾಳಜಿ ಮತ್ತು ಕಕ್ಕಲಾತಿಗಳು ಕಂಡು ಬರುತ್ತವೆ. ಹೆಣ್ಣು ತನ್ನ ಮೇಲಾದ ಅನ್ಯಾಯ, ಸೇಡು ತಿರಿಸಿಕೊಳ್ಳುವಲ್ಲಿ ಮಾಡುವ ಧೈರ್ಯ, ಸಾಹಸ ಕುರಿತು 'ದಂಗೆ' ಕಾದಂಬರಿಯಲ್ಲಿ ಮೂಡಿ ಬಂದಿದೆ. ದಂಗೆ ಕಾದಂಬರಿಯ ಕಥಾನಾಯಕಿ ದುರಗವ್ವ ಇಕೆ ಗಂಡಸತ್ತ ರಂಡಿ ಮುಂಡೆಯಾಗಿ ಚಿಕ್ಕ ಮಗಳನ್ನು ಕಟ್ಟಿಕೊಂಡು ಊರು ಬಿಟ್ಟು ಪರ ಊರಿಗೆ ದುಡಿಯಲು ಹೋದಳು. ಅಲ್ಲಿ ಊರ ಕುಲಕರ್ಣಿ ಇವಳೊಂದಿಗೆ ದೋಸ್ತಿ ಮಾಡಿಕೊಂಡನು ಅದು ಮುಂದೆ ಗಾಡವಾಗಿ ಬೆಳೆದು ಪ್ರೇಮವಾಯಿತು. ದುರಗವ್ವ ತನ್ನ ಜೀವನ ಕಹಿ ಘಟನೆಗಳನೆಲ್ಲ ಮರೆತು ಮಗಳ ಏಳಿಗೆಯನ್ನು ಬಯಸುತ್ತಿದಳು. ಮಗಳು ಶಾಲೆ ಕಲೆತು ದೊಡ್ಡವಳಾಗಿ ಕಾಲೇಜು ಸೇರಿದಳು. ಇತ್ತ ಕುಲಕರ್ಣಿಯ ಮಗನು ಕಾಲೇಜು ಓದುತ್ತಿದ್ದು ಇವರಿಬ್ಬರು ಪ್ರೀತಿಯ ಬಲೆಯಲ್ಲಿ ಸಿಕ್ಕು ಸೋಲಾಪೂರಕ್ಕೆ ಓಡಿ ಹೋಗಿ ಮದುವೆಯಾಗಬೇಕು ಎಂದು ತಿರ್ಮಾನಿಸಿದರು ಈ ಸುದ್ಧಿ ತಿಳಿದ ಕುಲಕರ್ಣಿ ಗೋವಿಂದಪ್ಪ ದುರಗವ್ವನನ್ನು ಕರೆದುಕೊಂಡು ಸೋಲಾಪೂರಕ್ಕೆ ಹೋಗಲು ಉಪಾಯದಿಂದ ನಿಶ್ಚಯ ಮಾಡಿಕೊಂಡು ರೈಲು ಗಾಡಿ ಹತ್ತಿದ ಗೋವಿಂದಪ್ಪ ರೈಲಿನಲ್ಲಿ ರಾತ್ರಿ ಮವ್ವಾಲಿಗಳಂತ(ರೌಢಿ)ಗಳನ್ನು ಕರೆಸಿಕೊಂಡು ಮಾತನಾಡುತ್ತಿದ್ದನ್ನು. ದುರಗವ್ವನ ಮಗಳನ್ನು ಮುಗಿಸುವ ಹೊಂಚು ನಡೆದಿತ್ತು. ದುರಗವ್ವ ಎಚ್ಚರಿದು ನಿದ್ದೆ ಹತ್ತಿದವರಂತೆ ನಟ್ಟಿಸಿ ಎಲ್ಲವನ್ನು ತಿಳಿದುಕೊಂಡಳು. ದಾಂಡಿಗರು (ಮವ್ವಾಲಿಗಳು) ಹೋದನಂತರ ದುರಗವ್ವ ಕುಲಕರ್ಣಿ ಗೋವಿಂದಪ್ಪನಿಗೆ ತಡವಿ ಎಬ್ಬಿಸಿ ನನಗೆ ಕಾಲಮಡಿ ಬಂದಾವ ಸಂಡಾಸು ಕೋಲಿ ತೋರಿಸು ನಡಿ ಎಂದು ಹೇಳುವಳು ಗೋವಿಂದಪ್ಪ ದುರಗವ್ವ ಕಾಲಮಡಿದ ನಂತರ ತಾನು ಕಾಲುಮಡಿಲು ಹೋದ ಆಗ ದುರಗವ್ವ ಬೋಗಿ ಬಾಗಿಲನ್ನು ತೆರೆದು ಗಾಳಿಗೆ ಮುಖವೊಡ್ಡಿನಿಂತಿದ್ದಳು ಆಗ ಗೋವಿಂದಪ್ಪ ಬಂದು ಬಿದ್ದುಗಿದ್ದಿ ಬಾ ಇಕಾಡಿ ಎಂದು ಕರೆದ ಆಗ ದುರುಗಿ ಸ್ವಲ್ಪ ನೀವು ಬನ್ನಿ ಇಲ್ಲಿ ಗಾಳಿ ಚನ್ನಾಗಿ ಬಿಸುತ್ತಿದೆ ಎಂದು ಉಪಾಯ ಮಾಡಿ ಕರೆದಳು. ಕುಲಕರ್ಣಿ ಯಾವ ವಿಚಾರವು ಮಾಡದೆ ದುರಗಿಯ ಬಳಿಗೆ ಬಂದ ತನ್ನ ಮಗಳ ಸಾತಿಯ ಮೇಲಿನ ಮಮಕಾರ ಉಕ್ಕಿತ್ತು. ಆಗ ದುರಗಿ ತನ್ನ ಪ್ರೀಯಕರ ಕುಲಕರ್ಣಿ ಗೋವಿಂದಪ್ಪನನ್ನು ರೈಲಿನಿಂದ ಜೋರಾಗಿ ದಬ್ಬಿದಳು. ರಭಸಕ್ಕೆ ಕೆಳಗೂರುಳಿದನು ದುರಗಿ ಬಾಗಿಲು ಮುಚ್ಚಿದಳು(ರೈಲಿನ) ಹೃದಯ ನಗಾರಿಯಂತೆ ಹೊಡೆದುಕೊಳ್ಳುತ್ತಿತ್ತು. ಇಲ್ಲಿ ದುರುಗಿ ತನ್ನ ಪ್ರೀಯತಮನನ್ನು ಕೊಂದ ದುಃಖ ಅನುಭವಿಸಿದರೆ ತನ್ನ ಮಗಳು ಸಾತಿಗೆ ಮರಣದಿಂದ ಪಾರುಮಾಡಿದ ಸಂತೋಷ ಇನ್ನೊಂದೆಡೆ. ಬಂಡಾಯದ ಬದುಕು ತೋರಿಸುವಲ್ಲಿ ದುರುಗಿಯ ಪಾತ್ರ ಅತ್ಯಂತ ಗಟ್ಟಿತನದಿಂದ ಗೀತಾ ನಾಗಭೂಷಣರು ಚಿತ್ರಿಸಿದ್ದಾರೆ. ದುರುಗಿಯ ಚಿತ್ರಣ ನೋಡಿದಾಗ ಸ್ತ್ರೀಯೂ ಅಬಲೆ ಅಲ್ಲ ಅವಳು ಮನಸ್ಸು ಮಾಡಿದರೆ ಏನುಬೇಕಾದರು ಸಾಧಿಸಬಲ್ಲಳು ಬಂಡಾಯ ಎಂಬುದು ಹೊತ್ತಿ ಉರಿದರೆ ಕುಲಕರ್ಣಿ ಗೋವಿಂದನ ಗತಿಯೂ ಹೇಗೆ ಆಯಿತೋ ಹಾಗೆ ಮಾಡಬಲ್ಲಳು ಎಂದು ಕಾದಂಬರಿಗಾರ್ತಿ ಈ ಕಾದಂಬರಿಯಲ್ಲಿ ತಿಳಿಸುತ್ತಾರೆ.

ಗೀತಾ ನಾಗಭೂಷಣರ ಬದುಕು ಕಾದಂಬರಿಯೂ ಹಳ್ಳಿಯ ನಿಜ ಸ್ಥಿತಿಯನ್ನು ತಿಳಿಸುವಂಥಹದು. ಬದುಕು ಕಾದಂಬರಿಯಲ್ಲಿ ಹಿಂದಿನಿಂದಲೂ ಹರಿದು ಬಂದ ರೂಢಿ ಸಂಪ್ರದಾಯಗಳ ವಿರುದ್ಧ ಸ್ತ್ರೀ ಬಂಡೇಳುವುದು ನೋಡುತ್ತೇವೆ. ಜೋಗಣಿ ಬಿಡುವ ಪದ್ಧತಿ ತಲೆತಲಾಂತರದಿಂದ ಹರಿದು ಬಂದಿತು. ಆದರೆ ಜಂಬಗಿಯ ತುಳಜಾ ಜೋಗಣಿಯಾದಳು ನಿಜ. ಅದನ್ನು ಧಿಕ್ಕರಿಸಿ ಹುಸನಪ್ಪನೊಂದಿಗೆ ಮದುವೆಯಾಗಿದ್ದಳು. ಅದು ಅಲ್ಲದೆ ಮರಗಿಯ ಮಗಳು ನೀಲವ್ವ ಜೋಗಣಿಯಾಗಲು ನಿರಾಕರಿಸಿ ಆತ್ಮಹತ್ಯೆ ಮಾಡಿಕೊಂಡಿದ್ದಳು. ಕಲ್ಯಾಣಿ ಜೈಲಿಗೆ ಹೋಗಿ ಬಂದಾಗ ಕೆಲವು ಸಂಪ್ರದಾಯ ನೆರವೇರಿಸಲು ತಳವಾರ ಜನಾಂಗದ ಮುಖಂಡರು ತಿಳಿಸಿದರು. ಸಂಪ್ರದಾಯಗಳನ್ನು ಕಲ್ಯಾಣಿ ಬೇಡ ಎಂದು ತಿರಸ್ಕರಿಸುವನು. ಈ ಕಾದಂಬರಿಯಲ್ಲಿ ಬಂಡಾಯ ಎಂಬುವುದು ಪ್ರತಿಯೊಂದು ಪಾತ್ರದಲ್ಲಿ ಮೂಡಿಬಂದಿದೆ. ಆದರೆ ಕೆಲವು ಪಾತ್ರಗಳು ಧ್ವನಿ ಎತ್ತಲಾರದೆ ತಮ್ಮನ್ನು ತಾವೆ ಸಾಯಿಸಿಕೊಳ್ಳುವುದು ಕಂಡುಬರುತ್ತದೆ. ಕಾಶಮ್ಮ ಲಿಂಗರಾಜರ ಪ್ರೇಮ ಪ್ರೀತಿಯ ಮುಂದೆ ಯಾವ ಜಾತಿ ಜನಾಂಗವು ಬರುವುದಿಲ್ಲ. ಎಲ್ಲವನ್ನು ಧಿಕ್ಕರಿಸಿ ಲಿಂಗರಾಜ ನಿಂತರೆ ಕಾಶಮ್ಮ ಗಂಡ ಮಾರ್ಥಂಡ, ತಂದೆ–ತಾಯಿ, ತಮ್ಮನನ್ನು ಮತ್ತು ಇಡೀ ತಳವಾರ ಕುಲವನ್ನೇ ದಿಕ್ಕರಿಸಿ ಲಿಂಗರಾಜನ ತೋಟದ ಮನೆಯಲ್ಲಿರುವಳು. ಲಿಂಗರಾಜ ಮತ್ತು ಕಾಶಮ್ಮ ಎಷ್ಟೇ ತೊಂದರೆಗಿಡಾದರು ಲೆಕ್ಕಿಸದೆ ಪ್ರೇಮ ಪ್ರೀತಿಯಿಂದ ಜೀವನ ಮುಂದುವರೆಸುವರು. ಕಲ್ಯಾಣಿಯ ಮಗ ಸಣ್ಣ ಮಲ್ಲು ತಂದೆ–ತಾಯಿಯನ್ನು ತಿರಸ್ಕರಿಸಿ ಮರಾಠ ಹುಡುಗಿಯನ್ನು ಮದುವೆಯಾಗುವನು. ಕಾದಂಬರಿಯಲ್ಲಿ ಸಿಟ್ಟು ಸೇಡು ಎನ್ನುವದು ಚಿತ್ರಿಸುವಲ್ಲಿ ಕಲ್ಯಾಣಿಯ ಪಾತ್ರವೇ ಸಾಕ್ಷಿಯಾಗಿದೆ. ಕುರುಬರ ಮುಕುಡಪ್ಪ ಕಾಶಮ್ಮನ ಬಗ್ಗೆ ಆಡಿದ ಮಾತು ಸಹಿಸದ ಕಲ್ಯಾಣಿ ಮುಕುಡಪ್ಪನಿಗೆ ಸಾಯಿವಂತೆ ಥಳಿಸಿರುವುದು ಅರಿಯುತ್ತೇವೆ. ಈ ಕಾದಂಬರಿಯಲ್ಲಿ ಬಂಡಾಯ, ಹೋರಾಟ ಎನ್ನುವಂತಹದು ತಿಳಿಯುತ್ತದೆ. ಬದುಕು ಕಾದಂಬರಿಯಲ್ಲಿ ಮಲ್ಲಪ್ಪ ಜಮಾದರ ಒಬ್ಬ ಶ್ರೀಮಂತ ವ್ಯಕ್ತಿ. ಮೇಲಾಗಿ ಗಟ್ಟಿಮುಟ್ಟಾದ ದೇಹವನ್ನು ಹೊಂದಿರುವವನು ಯಾವ ಸಂದರ್ಭದಲ್ಲಿಯು ಧೈರ್ಯಗುಂದದವ. ಮಗಳು ಕಾಶಮ್ಮ ಮಾಡಿದ

ಸಂಗತಿಯಿಂದ ಆತ್ಮಹತ್ಯೆ ಮಾಡಿಕೊಳ್ಳುವನು. ಬಂಡಾಯದ ವ್ಯಕ್ತಿಯಲ್ಲಿ ಆತ್ಮಹತ್ಯೆ ಎಂಬುವುದು ಕಂಡುಬರುತ್ತದೆ. ಆದರು ಮಲ್ಲಪ್ಪ ಜಮಾದಾರ ತನ್ನ ವಯದಲ್ಲಿ (ವಯಸ್ಸಿನಲ್ಲಿ) ಮಾಡಿದ ದರ್ಪ, ಹೋರಾಟವನ್ನು ನೋಡಿದರೆ ಕಾದಂಬರಿಗೆ ಹೆಚ್ಚು ಸೊಬಗು ಬರುತ್ತದೆ. ಬದುಕು ಕಾದಂಬರಿಯಲ್ಲಿ ಸೇಡು, ರೋಷ, ಹೋರಾಟ, ಬಂಡಾಯ ಮುಂತಾದ ನಿಲುವುಗಳು ಮೂಡಿಬಂದಿವೆ. ಈ ಕಾದಂಬರಿಯೂ ಬಂಡಾಯದ ಅಲೆಯನ್ನು ಎಬ್ಬಿಸುವಲ್ಲಿ ತನ್ನದೆ ಆದ ಪಾತ್ರ ವಹಿಸುವಂತದ್ದಾಗಿದೆ. ಈ ಕಾದಂಬರಿಯಲ್ಲಿ ಊಳಿಗಮಾನ್ಯ ಪದ್ಧತಿಯ ಮುಖ ಕಂಡು ಬರುತ್ತವೆ. ಲಿಂಗರಾಜ ಕಾಶಿಯನ್ನು ಗಂಡನ ಮನೆಯಿಂದ ಓಡಿಸಿಕೊಂಡು ಬಂದು ಊರ ಹೊರಗೆ ತೋಟದ ಮನೆಯಲ್ಲಿ ತಾಳಿಕಟ್ಟದೆ ಇಡುವನು. ಇದು ಅವನ ವರ್ಗ ಪ್ರಜ್ಞೆಯನ್ನೇ ತೋರಿಸುವಂತದ್ದಾಗಿದೆ. ಪ್ರೀತಿಸಿದ ಹೆಣ್ಣಿಗೆ ತಾಳಿಯ ಭಾಗ್ಯಕೊಡದೆ ರಂಡಿಯಾಗಿ ತೋಟದ ಮನೆಯಲ್ಲಿ ಇಡುವದು ನೋಡುತ್ತೇವೆ. ಆದರು ಬದುಕು ಕಾದಂಬರಿಯಲ್ಲಿ ಮನುಷ್ಯತ್ವದ ನೆಲೆಗಳಿಗೆ  ಬೆಲೆ ಹೆಚ್ಚಾಗಿ ಕಂಡು ಬರುತ್ತವೆ.

ಮನುಷ್ಯನು ಬಂಡಾಯದ ಬದುಕು ನಡೆಸಿರುವುದು ಕೆಲವು ನಿದರ್ಶನಗಳಿಂದ ಕಾದಂಬರಿಕಾರರು ತಿಳಿಸಿಕೊಟ್ಟಿದ್ದಾರೆ. ಗೀತಾ ನಾಗಭೂಷಣರ ಇನ್ನು ಕೆಲವು ಕಾದಂಬರಿಗಳಾದ ಕಾಗೆ ಮುಟ್ಟಿತು, ನೀಲಗಂಗಾ, ಮಾಪುರ ತಾಯಿಯ ಮಕ್ಕಳು ಮುಂತಾದ ಕಾದಂಬರಿಗಳಲ್ಲಿ ಸ್ತ್ರೀಯ ಮೇಲಾದ ಅನ್ಯಾಯವನ್ನು ಎತ್ತಿ ತೋರಿಸುವರು. ಆದರೆ ಇಲ್ಲಿ ಯಾವ ಪಾತ್ರಗಳು ಪುರುಷ ಪ್ರಧಾನ ವ್ಯವಸ್ಥೆಯ ವಿರುದ್ಧ ನಿಲುವುದಿಲ್ಲ ಮತ್ತು ಬಂಡಾಯ ಸಾರುವ ಮನಸ್ಸು ಮಾಡುವುದಿಲ್ಲ. ಬದಲಾಗಿ ಬಂಡಾಯಕ್ಕೆ ಪ್ರೇರಕವಾದ ಅಂಶವನ್ನು ಓದುಗರಿಗೆ ಕಟ್ಟಿಕೊಡುವಂತವುಗಳಾಗಿ ಕಂಡು ಬರುತ್ತವೆ.

**ಅಂಟಿಳಿಟಣುಂಟಿ**

ಹೈದ್ರಾಬಾದ ಕರ್ನಾಟಕದ ಕಾದಂಬರಿಗಳಲ್ಲಿ ಮೂಡಿಬಂದಿರುವಂತೆ ಇಲ್ಲಿಯ ಸಾಹಿತ್ಯದಲ್ಲಿ ಬಂಡಾಯದ ಅಲೆಗಳು ಎದ್ದು ಕಾಣುತ್ತವೆ. ಅನ್ಯಾಯ, ಆಕ್ರಮಣಗಳು ಆದ ಸಂದರ್ಭದಲ್ಲಿ ಸಹಿಸದೆ ಸಿಡಿದೇಳುವ ಎಷ್ಟೋ ಸ್ತ್ರೀ ಪಾತ್ರಗಳು ನೋಡುತ್ತೇವೆ. ಅದರಲ್ಲಿಯೂ ಗತಿ ಕಾದಂಬರಿಯ ಸೋನಿ, ಲಚ್ಚಿ, ದಂಗೆ ಕಾದಂಬರಿಯ ಮರುಗಿ, ಧುಮ್ಮಸು ಕಾದಂಬರಿಯ ಸೋನಿ, ಬದುಕು ಕಾದಂಬರಿಯ ತುಳುಜಾ ಮುಂತಾದ ಪಾತ್ರಗಳು ಹೆಣ್ಣು ಮನಸ್ಸು ಮಾಡಿದರೆ ಏನೆಲ್ಲ ಸಾಧಿಸಬಲ್ಲಳು. ಆದರೆ ಬಂಡಾಯದ ಪ್ರವೃತಿ ಬೇಕು ಎಂದು ಸಾರುವಂತವುಗಳಾಗಿವೆ. ಈ ಭಾಗದ ಹಲವು ಕಾದಂಬರಿಗಳಲ್ಲಿ ದುಡಿಯುವ ವರ್ಗದ, ಅನಕ್ಷರಸ್ಥರ, ಅಮಾಯಕ ಕೆಳವರ್ಗದ ಜನರ ಮತ್ತು ಶ್ರಮ ಜೀವಿಗಳ ಬದುಕಿನ ನೈಜಸ್ಥಿತಿಗತಿಯನ್ನು ಈ ಭಾಗದ ಕಾದಂಬರಿಕಾರರು ಕಟ್ಟಿಕೊಟ್ಟಿದ್ದಾರೆ. ಅನ್ಯಾಯವನ್ನು ಎದುರಿಸುವ ಮನಸ್ಸು ಮನುಷ್ಯನಲ್ಲಿ ಗಟ್ಟಿಗೊಳಿಸುವ ಬಗೆಯನ್ನು ಹಲವು ಸೃಜನ ಶೀಲ ಬರಹಗಾರರು ತಮ್ಮ ಸಾಹಿತ್ಯದ ಮೂಲಕ ಬಿಂಬಿಸಿರುವರು. ಹೈದ್ರಾಬಾದ ಕರ್ನಾಟಕದ ಕಾದಂಬರಿಗಳಲ್ಲಿ ಮೂಡಿ ಬಂದಿರುವಂಥೆ ಬಂಡಾಯ ಎಂಬುದು ತಲೆ–ತಲಾಂತರದಿಂದ ವ್ಯಾಪಕವಾಗಿ ಬೆಳೆದು ಬಂದಿರುವುದು ತಿಳಿಯುತ್ತದೆ. ಅದಕ್ಕಾಗಿಯೇ ಈ ಭಾಗಕ್ಕೆ ತನ್ನದೇ ಆದ ವೈಶಿಷ್ಟತೆ ಇದೆ ಎಂದು ಈ ಭಾಗದ ಕಾದಂಬರಿಗಳ ಮೂಲಕ ಕಾದಂಬರಿಕಾರರು ಗ್ರಾಮೀಣರ ಜೀವನದ ನಿಜಸ್ಥಿತಿಯ ಬಂಡಾಯದ ಬದುಕಿನ ಮೂಲಕ ತಿಳಿಸಿಕೊಟ್ಟಿದ್ದಾರೆ.

**ಆಕರಗಳು( ಖ್ವಿಜ್ವಿಡಿಜಟಿಛಿಜ)**


೧) ಶಾಂತರಸ, ಸಣ್ಣಗೌಡಸಾನಿ: ಪು:86. ನೃಪತುಂಗ ಅಧ್ಯಯನ ಸಂಸ್ಥೆ ಸೇಡಂ–2010.
೨) ಕುಂ.ವೀರಭದ್ರಪ್ಪ, ಬೇಲಿಯ ಹೂಗಳು: ಪು:20. ಹೇಮಂತ ಸಾಹಿತ್ಯ ರಾಜಾಜಿ ನಗರ, ಬೆಂಗಳೂರು–2008.
೩) ವಾಲೀಕಾರ ಚೆನ್ನಣ್ಣ, ಕೋಟೆಯ ಬಾಗಿಲು: ಪು:85. ದಲಿತ ಬಂಡಾಯ ಸಾಹಿತ್ಯ ಪ್ರಕಾಶನ ಕೇಂದ್ರ, ಗುಲಬರ್ಗಾ–2002.
೪) ಲಲಿತಾನಾಯಕ ಬಿ.ಟಿ: ಗತಿ: ಪು:11. ಪತ್ರಿಕೆ ಪ್ರಕಾಶನ, ಬೆಂಗಳೂರು–1986.
೫) ದಂಡಪ್ಪ ಎಚ್ ಹಾಗೂ ಸುಮಿತ್ರಾಬಾಯಿ ಬಿ.ಎನ್.(ಸಂ)ಸುವರ್ಣ ಸಾಹಿತ್ಯ ವಿಮರ್ಶೆ: ಪು:418. ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು–2006.
೬) ಶಾಂತರಸ ಸಣ್ಣಗೌಡಸಾನಿ: ಪು:31. ನೃಪತುಂಗ ಅಧ್ಯಯನ ಸಂಸ್ಥೆ, ಸೇಡಂ–2010.
೭) ನಾಗಭೂಷಣ ಗೀತಾ, ಕಾಗೆ ಮುಟ್ಟಿತು: ಪು:72. ಶ್ರೀ ಸಿದ್ಧಲಿಂಗೇಶ್ವರ ಪ್ರಕಾಶನ, ಗುಲಬರ್ಗಾ–2009.
೮) ಅದೇ: ಪು:100. –2009.
೯) ಸಬರದ ಬಸವರಾಜ. (ಸಂ) ಕನ್ನಡ ಸಾಹಿತ್ಯ ಘಟ್ಟಗಳು: ಪು:201. ಕರ್ನಾಟಕ ವಿದ್ಯಾವರ್ಧಕ ಸಂಘ, ಧಾರವಾಡ–2002.
೧೦) ದಳವಾಯಿ ರಾಜಪ್ಪ, ಕನ್ನಡ ಸಾಹಿತ್ಯ ಕೋಶ: ಪು:78. ಶ್ರೀ ರಾಘವೇಂದ್ರ ಪ್ರಕಾಶನ ನಂ.9 ದಿವಾನ್ ಖಾನ್‌ಗಲ್ಲಿ ಚಿಕ್ಕಪೇಟ. ಬೆಂಗಳೂರು–1996.
೧೧) ಸಬರದ ಬಸವರಾಜ (ಸಂ) ಕನ್ನಡ ಸಾಹಿತ್ಯ ಘಟ್ಟಗಳು: ಪು:239. ಕರ್ನಾಟಕ ವಿದ್ಯಾವರ್ಧಕ ಸಂಘ, ಧಾರವಾಡ–2002.
೧೨) ಕುಂ.ವೀರಭದ್ರಪ್ಪ, ಬೇಲಿಯ ಹೂಗಳು: ಪು:6. ಹೇಮಂತ ಸಾಹಿತ್ಯ, ರಾಜಾಜಿನಗರ ಬೆಂಗಳೂರು–2008
೧೩) ವಾಲೀಕಾರ ಚೆನ್ನಣ್ಣ, ಒಂದು ಹೆಣ್ಣಿನ ಒಳಜಗತ್ತು: ಪು:67, 68. ದಲಿತ ಬಂಡಾಯ ಸಾಹಿತ್ಯ ಪ್ರಕಾಶನ, ಕೇಂದ್ರ ಗುಲಬರ್ಗಾ–2002.
೧೪) ಸಬರದ ವಿಜಯಶ್ರೀ.(ಸಂ) ವಿಮರ್ಶಾಲೇಖನಗಳು: ಪು:263. ಪ್ರಸಾರಾಂಗ ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ–2005.